Reg. No. M. 1550

KODAGU

20—3—1936

IF NOT

delivered

please return to

"KODAGU"
OFFICE,
MERCARA.

ಕೊಡಗು

ಅಚ್ಚುಮೆಚ್ಚಿನ
ಮುದ್ರಣ ಕಲಸಕ್ಕೆ
"ಕೊಡಗು"
ಪ್ರೆಸ್ಸ್,
ಮಡಿಕೇರಿ.

ಹೆಚ್ಚಿನ ವಿಷಯಕ್ಕೆ
ಕೂಡಲೆ ವಿಚಾರಿಸಿರಿ.

ಸಕ್ಕೇನ ಭೂತದಯಯಾ ವಿದ್ಯಾ, ವೀರೇ ಕೃಯುಕ್ಕತಾ॥ ಐಕ್ಕಮುಕ್ಕೇನ ಭೋಕಾತಾಂ ಸುಸಿರಾ ರಾಜ್ಯ ಸಂಪದಾ

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವದು.

ವಾರ್ಷಿಕ ಚಂದಾ ರೂ. ೩—೮—೦ ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಸಂಪುಟ ೧೫] ಮಡಿಕೇರಿ, ತಾ. ೨೦—೩—೧೯೩೬ [ಸಂಚಿಕೆ ೩೯

Telephon;
3145

By Appointment
To H. E. The Governor of Madras.

Telegrams:
'PRECIOUS.'

Brooch

Necklace.

Ring.

Ring.

V. SUBRAMANIA IYER.

Jeweller, & Diamond Merchant,

52—17 2 & 3 Kuppumuthu Street Tiruvateswaranpet. POST BOX 423 TRIPLICANE. P. O., MADRAS.

Catalogue & special designs with quotations (free) on enqu ry

BANKING FACILITIES OF EVERY DESCRIPTION.

Head office:—UDIPI.

BRANCHES:—
1. Madras,
2 Coondapoor.
3 Car Street, Mangalore,
4. Bunder, Mangalore.
5 Shimoga.
6. Udipi
7. Mercara.
8. Virarajendrapet

Security.

The financial strength and integrity of this Bank is shown by the growth of the RESERVES from a modest sum of Rs. 83000 in 1927 to its present position with Rs. 3,64,644.

BANKERS AT—
1. Bombay.
2. Calcutta.
3. Karachi
4. Bangalore.
5. Mysore.
6. Calicut.
7. Cannanore.
8. Cochin, and other important places.

To those thinking of investments the following figures should strongly appeal.

Capital: Anthorised, issued and subscribed—Rs. 3,50,000.
Paid up Rs. 2,80,750.
Deposits—Rs. 27,99,323. Working Capital—Rs. 35,66,707.

Fixed Deposits now received upto 5%.

The Canara Banking Corporation Udipi Limited.

52—18 Estd. 1906.

ಜನರಲ್
ಅಷ್ಯೂರೆನ್ಸ್ ಸೊಸೈಟಿ, ಲಿಮಿಟೆಡ್.
(ಸ್ಥಾಪಿತವಾದದ್ದು 1907 ರಲ್ಲಿ)
ಜೀವವಿಮೆಯಲ್ಲಿನ ಅತ್ಯುತ್ತಮ ಸೌಲಭ್ಯಗಳನ್ನೆಲ್ಲ
ಕೊಡುತ್ತದೆ.
ಬೋನಸ್ಸು ಅತೀ ಹೆಚ್ಚು.

ಜೀವಾವಧಿ ಪಾಲಿಸಿಗಳ ಮೇಲೆ ವರ್ಷಕ್ಕೆ ರೂ. 25%೦
ಎಂಡೋಮೆಂಟ್ ಪಾಲಿಸಿಗಳ ಮೇಲೆ ವರ್ಷಕ್ಕೆ ,, 20%೦
ಪಾಲಿಸಿಯ ಶರತ್ತುಗಳು ಅತೀ ಸುಲಭ
ಎಷ್ಯೂರೆನ್ಸ್ ಯೋಜನೆಗಳು ಎಲ್ಲರಿಗೂ ಹಿತಕರವಾಗಿದೆ.
ಏಜೆನ್ಸಿ ನಿಯಮಗಳು ಅತೀ ಲಾಭದಾಯಕವಿದ್ದು
ವಂಶಪಾರಂಪರ್ಯ ಕಮಿಶನ್ ದೊರೆಯುವಂತಿದೆ.
ಹೆಚ್ಚಿನ ವಿವರಗಳಿಗೆ ಕೂಡಲೇ ಬರೆಯಿರಿ.

ಪಿ. ಡಿ. ಭಾಗವ, ಎಫ್. ಎಸ್. ಎಸ್. (ಲಂಡನ್),
ಜನರಲ್ ಮೇನೇಜರ್, ದಿ ಜನರಲ್ ಅಷ್ಯೂರೆನ್ಸ್
ಸೊಸೈಟಿ ಲಿಮಿಟೆಡ್, ಅಜ್ಮೀರ್. ಅಥವಾ:—
ಎ. ಎನ್ ಎಸ್ ಅಯ್ಯಂಗಾರ್,
ಸುಪರಿಂಟೆಂಡೆಂಟ್, ಜನರಲ್ ಅಷ್ಯೂರೆನ್ಸ್ ಬಿಲ್ಡಿಂಗ್,
ಚಾಮರಾಜಪೇಟೆ, 3ನೇ ರೋಡ

52—41

ವಿವಿಧ ವಾರ್ತೆಗಳು.

ಕಳ್ಳರನ್ನು ಹಿಡಿಯುವ ವ್ಯವಸ್ಥೆ.

ದೇವಾಲಯಗಳಿಂದ ದ್ರವ್ಯ ಕದಿಯುವವರು ಸ್ವಲ್ಪ ಜಾಗ್ರತರಾಗಬೇಕಾಗಿದೆ. ಜಪಾನಿನ ಒಂದು ಬೌದ್ಧ ದೇವಾಲಯದಿಂದ, ಒಬ್ಬನು ದೇವರ ಕೋಣೆಯಿಂದ ಹಣ ಕದಿಯಲು ಪ್ರಯತ್ನ ಮಾಡಿದನು. ಕೂಡಲೇ ದೇವಾಲಯದಲ್ಲೆಲ್ಲಾ ಒಂದು ಶಬ್ದ ಉಂಟಾಯಿತು ಎಲ್ಲರಿಗೂ ಎಚ್ಚರವಾಯಿತು, ಕಳ್ಳನನ್ನು ಹಿಡಿದರು. ಇಂಥಾ ಯೋಜನೆಗಳು ನಮ್ಮ ದೇವಾಲಯಗಳಿಗೆ ಬೇಕಾಗಿವೆ.

—೦೦೦—

'ಹಿಂದೂ ಮುಸ್ಲಿಂ ಐಕ್ಯವಾಗಬೇಕು.'

ಕಳೆದ ವಾರದ ಒಕ್ಕಿದ್ನ ಸಮಯ, ಮದ್ರಾಸಿನ ಕ್ರಿಸೆಂಟ್ ಸಂಘದ ನೇತೃತ್ವದಲ್ಲಿ ಒಂದು ಸಾರ್ವಜನಿಕ ಸಭೆಯು ಜರಗಿತು. ಅನೇಕ ಜಾತಿ ಮತ್ತು ಮತದ ಜನರು ಮುಸ್ಲಿಮರೊಡನೆ ಕೂಡಿದ್ದರು ಹಿಂದೂ ಮುಸ್ಲಿಂ ಐಕ್ಯವಾಗಬೇಕೆಂದೂ, ಭಾರತೀಯರು ಕೋಮುವಾರು ಭೇದವನ್ನು ಮರೆತು ಬಿಡಬೇಕೆಂದೂ ಭಾಷಣಗಳಾದುವು. ಅಲ್ಲಿನ ಪ್ರಮುಖರಾದ ಡಾ. ಪಿ. ವರದರಾಜುಲು ನಾಯಡುರವರು ಸಭೆಯ ಅಧ್ಯಕ್ಷರಾಗಿದ್ದರು.

—೦೦೦—

ಕೃತಕ ರಬ್ಬರು ಮತ್ತು ಎಣ್ಣೆ.

ಜರ್ಮನಿಯ ವಿಜ್ಞಾನ ಶಾಸ್ತ್ರಜ್ಞರು ಕೃತಕ ರಬ್ಬರನ್ನೂ ಕೃತಕ ಪೆಟ್ರೋಲನ್ನೂ ತಯಾರಿಸಿದ್ದಾರೆ ಅವುಗಳನ್ನು ಪರಿಶೋಧಿಸಿ ಉಪಯೋಗಿಸಿದಲ್ಲಿ ಸ್ವಾಭಾವಿಕವಾಗಿರುವ ರಬ್ಬರಿಗಿಂತ ಕೃತಕ ರಬ್ಬರು ಸೇಕಡ 10 ರಿಂದ 30 ರಷ್ಟು ಹೆಚ್ಚು ಬಾಳಿಕೆ ಒರುವುದಾಗಿ ಹಿಟ್ಲರರು ತಿಳಿಸಿದರು. ಜರ್ಮನಿಗೆ ಬೇಕಾಗುವ ಪೆಟ್ರೋಲನ್ನು ಸಹ ವಿಜ್ಞಾನ ಶಾಸ್ತ್ರಜ್ಞರು ಸಾಕಷ್ಟು ತಯಾರಿಸಬಲ್ಲರೆಂದೂ ತಿಳಿಸಿದರು

—೦೦೦—

ಆಕಾಶದಲ್ಲಿ ಹಾರುವ ಮೋಟರ್ ಬಂಡಿ!

ಅಮೇರಿಕದ ಸಂಯುಕ್ತ ಸಂಸ್ಥಾನಗಳ 'ಓಟೋ ಗಿರೋ' ಕಂಪೆನಿಯವರು ಒಂದು ನೂತನವಾದ ಮೋಟರನ್ನು ತಯಾರಿಸಿದ್ದಾರೆ. ಅದರ ವೈಲಕ್ಷಣ್ಯವೆಂದರೆ ರೆಕ್ಕೆಗಳಂತಿರುವ ಪದಾರ್ಥವಿದೆ. ಮೋಟರು, ರಸ್ತೆಯಲ್ಲಿ ಓಡುವಾಗ ಆ ರೆಕ್ಕೆಗಳು ತಮ್ಮಷ್ಟಕ್ಕೆ ಮುಚ್ಚಿಕೊಳ್ಳುವುವು ಆದರೆ ಮೇಲಕ್ಕೆ ಹಾರುವ ಸಂದರ್ಭದಲ್ಲಿ ಒಂದು ಯಂತ್ರದ ಸಹಾಯದಿಂದ ಕ್ಷಣಮಾತ್ರದಲ್ಲಿ ಹಕ್ಕಿಗಳನ್ನು ನಡಿಸುವ ಶಕ್ತಿಯಿಂದ ರೆಕ್ಕೆಗಳನ್ನು ನಡಿಸುವ ಹಾಗೆ ಮಾಡುತ್ತಾರೆ. ಕೂಡಲೆ ರೆಕ್ಕೆಗಳು ವಿಸ್ತರಿಸಿ ಮೋಟರು ಆಕಾಶಕ್ಕೇರುವುದು.

—೦೦೦—

ಭೂಕಂಪದ ಕಾರಣಗಳೇನ?

ಭೂಗರ್ಭದಲ್ಲಿ ಬಂಡೆಗಳು ಒಡೆಯುವುದರಿಂದ ಭೂಕಂಪಗಳು ಉಂಟಾಗುತ್ತವೆ ಅದಲ್ಲದೆ, ಒಳಗಿರುವ ಮಹತ್ತಾದ ಬಂಡೆಗಳು ಕುಸಿಯುವುದರಿಂದಲೂ ಭೂಕಂಪನಗಳಾಗುವುದುಂಟು. ಈ ಭೂಮಿಗೆ ಎಂಡು ಭೂಕಂಪದ ಪ್ರದೇಶಗಳಿವೆ. ಒಂದು ಸ್ಪೈನ್, ದಕ್ಷಿಣ ಇಟಲಿ, ಕೊಕಸಸ್ಸ ಪರ್ವತ, ಹಿಮಾಲಯ ಪರ್ವತ ಮತ್ತು ಚೀನಾದಿಂದಾಗಿ ಹಾದು ಹೋಗುತ್ತದೆ. ಇನ್ನೊಂದು ಉತ್ತರ ಮತ್ತು ದಕ್ಷಿಣ ಅಮೇರಿಕಾ, ಜಪಾನು ಮತ್ತು ನ್ಯೂಜಿಲೆಂಡಿನಿಂದ ಹಾದು ಹೋಗುತ್ತದೆ.

—೦೦೦—

ಮುಹಾಯುದ್ಧ.

ಪೌರ್ವಾತ್ಯದಲ್ಲಿ ಭಯಂಕರ ಯುದ್ಧ ಸಿದ್ಧತೆಗಳು ನಡೆಯುತ್ತಿವೆಯೆಂದೂ, ಅತ್ಯಕಡೆ ಪ್ರಯಾಣ ಮಾಡಿದ ಓರ್ವ ಅಮೇರಿಕನ್ ಪತ್ರಿಕಾ ಪ್ರತಿನಿಧಿಗಳಿಂದ ತಿಳಿದು ಬರುತ್ತದೆ. ಈ ಯುದ್ಧವು ಜಪಾನಿಗೂ ರಷ್ಯಾಕ್ಕೂ ನಡೆಯುವುದು. ಮಂಚ್ಯೂರಿಯಾ ಮತ್ತು ಸೋವಿಯಟ್ ಗಡಿನಾಡಿನಲ್ಲಿ ಎಲ್ಲೆಲ್ಲೂ ಸಂಗ್ರಾಮ ಸಿದ್ಧತೆಗಳು ಕಾಣಿಸುತ್ತಿವೆಯಂತೆ. 1914 ರಲ್ಲಿ ಯುರೋಪು ಖಂಡದಲ್ಲಿ ನಡೆದಂತೆ. ಜಪಾನಿಯರ ಮಂಚೂ ಕ್ಯೂದಲ್ಲಿ, ದಂಡಯೋಜನೆಗಳಿಂದ ಕೂಡಿದ, 50—60 ರೈಲ್ವೆ ಗಾಡಿಗಳನ್ನೂ, ಇಲ್ಲಿನ ಎಲ್ಲಾ ಟ್ರೈನುಗಳಲ್ಲಿ ಜಪಾನಿಯ ಸಂಗ್ರಾಮ ನಾಯಕರ, ಅತ್ಯಾವಶ್ಯಕ ಪ್ರಯಾಣ ಮಾಡುವುದನ್ನೂ ಕಂಡಿರುವರಂತೆ. ರಷ್ಯಾದ ಮೊಸ್ಕೊನಗರದಿಂದ, ಮಂಚಕ್ಯೂ ಗಡಿಗೆ, ದಿವಸಕ್ಕೆ—35 ಟ್ರೈನುಗಳು 75 ಗಾಡಿಗಳಿಂದ ಕೂಡಿದ, ಸೈನಿಕರನ್ನೂ ಯುದ್ಧ ಸಾಮಗ್ರಿಗಳನ್ನೂ ಸಾಗಿಸುವುದು ಇವರು ನೋಡಿರುವರು. ಅಲ್ಲದೆ ಗಡಿನಾಡಿನ ಹತ್ತಿರದಲ್ಲೆ ಸಾಕಷ್ಟಾಗಿರುವ 1000 ವಿಮಾನಗಳನ್ನೂ, ರಷ್ಯಾದವರು ತಂದಿರಿಸಿದ್ದಾರಂತೆ.

—೦೦೦—

ಹಿಂದೀಯರಿಗೆ ಆಪದ್ಬಾನವಲ್ಲ.

ಹಿಟ್ಲರರು ಹಿಂದೀಯರಿಗೆ ಒಂದು ಆಪದ್ಬಾನಕರ ವಾಕ್ಯವನ್ನಾಡಿದ್ದರಷ್ಟೆ. ಹೀಗೆ ಹೇಳಿದುದರ ಅರ್ಥವೇನು? ಎಂದು ಒಬ್ಬರು ಹಿಂದೀ ಪ್ರಮುಖರು ಹಿಟ್ಲರರನ್ನು ಸಂದರ್ಶಿಸಿ ಕೇಳಿದರಂತೆ. ಆಗ ಹಿಟ್ಲರರು—'ನಾವು ಹಿಂದೀಯರನ್ನು ಆಪದ್ಬಾನಿಸಲಿಲ್ಲ. ಯಾರನ್ನೂ ಆಪದ್ಬಾನಿಸಲಿಲ್ಲ. ನಿಮ್ಮ ರಕ್ತ ಬೇರೆ; ಸಂಸ್ಕೃತಿ ಬೇರೆ. ಆದುದರಿಂದ ನಮ್ಮವರು ಇತರರೊಡನೆ ಒಂದಾಗಲಾರರು ಆಗಬಾರದು ಎಂದಿಷ್ಟೇ ನಾವು ಹೇಳುವುದು. ಯೆಹೂದ್ಯರ ವಿಷಯದಲ್ಲಿಯೂ ದರೂ ನಮ್ಮ ಅಭಿಪ್ರಾಯವಿಷ್ಟೇ—ನಾವು ಯಾರನ್ನೂ ಹೀನೈಸುವುದಿಲ್ಲ. ನಾವು ಮೂತ್ರ ಬೇರೆಯಾಗಿ ಇರುತ್ತೇವೆ' ಇದಲ್ಲವೇ ಬುದ್ಧಿವಂತಿಕೆಯ ಮಾತು?

ರೈನ್‌ಲೀಂಡಿಗೆ ಹಿಟ್ಲರರ ಆಗಮನ.

ತಾ 12ನೇ ರಾತ್ರಿ ಹಿಟ್ಲರರು ರೈನ್‌ಲೀಂಡಿಗೆ ಬಂದು ಒಂದು ಭಾಷಣ ಮಾಡಿದರು ಇವರು ಭಾಷಣ ಮಾಡಿದ ಪ್ರದೇಶವು ಫ್ರೆಂಚ್ ಎಲ್ಲೆಕಟ್ಟಿನಿಂದ 10 ಮೈಲು ದೂರದಲ್ಲಿತ್ತು. ಸುಮಾರು ಒಂದು ಲಕ್ಷ ಜನರು ಉಪನ್ಯಾಸ ಕೇಳುವುದಕ್ಕೆ ನೆರೆದಿದ್ದರು.

—೦೦೦—

ಫ್ರೆಂಚ್ ಪ್ರಧಾನರ ಹೇಳಿಕೆ

ಫ್ರೆಂಚ್ ಪ್ರಧಾನ ಮಂತ್ರಿಗಳಾದ ಯಂ. ಸರೋಟ್‌ರವರು ಹಿಟ್ಲರರ ಪ್ರಕಟಣೆಗೆ ಈ ರೀತಿ ಉತ್ತರಕೊಟ್ಟಿರುವರು.—'ನ್ಯಾಯವಾಗಿ ಒಪ್ಪಿ ಮಾಡಿಕೊಂಡ ಕರಾರು ಒಪ್ಪಂದಗಳನ್ನು ಮುರಿದು ಹಾಕುವುದು ಸರಿಯಲ್ಲ. ಜನಾಂಗ ಸಂಘದ ರಂಜನೆಯಲ್ಲಿ ನಿರೂಪಿಸಿದ ಮೇರೆಗೆ ಜರ್ಮನಿಯು ವರ್ತಿಸಬೇಕು. ಫ್ರಾನ್ಸಿಗೆ ಜರ್ಮನಿಯನ್ನು ಆಕ್ರಮಿಸುವುದಾಗಲೀ, ಅಥವಾ ಜರ್ಮನಿಯ ಗಾಂಭೀರ್ಯವನ್ನು ನಾಶಪಡಿಸುವುದಾಗಲೀ ಉದ್ದೇಶವಿಲ್ಲ. ಫ್ರಾನ್ಸ್ ದೇಶವು ಜರ್ಮನಿಯೊಡನೆ ರಾಜಿಸಂಚಾತಿಗೆ ಮಾಡುವುದಕ್ಕೆ ಸಿದ್ಧವಿರುವುದು ಆದರೆ ಜನಾಂಗಗಳೊಡನೆ ಮಾಡಿಕೊಂಡ ಒಪ್ಪಂದಗಳನ್ನು ಮುರಿದು ಹಾಕುವುದಕ್ಕೆ ಫ್ರೆಂಚರು ಒಪ್ಪುವುದಿಲ್ಲ' ಎಂದರು.

—೦೦೦—

ಫ್ರೆಂಚರ ಸೈನ್ಯ ಚಲನೆ.

ಫ್ರೆಂಚ್ ಸಿಪಾಯಿಗಳಿಂದಲೂ, ಟ್ಯಾಂಕುಗಳಿಂದಲೂ, ಯುದ್ಧದ ಮೋಟಾರು ವಾಹನಗಳಿಂದಲೂ ತುಂಬಿದ್ದ 20 ರೈಲು ಬಂಡಿಗಳು ಜರ್ಮನಿಯ ಎಲ್ಲೆಕಟ್ಟಿನ ಕಡೆಗೆ ಹೊಂಟಿರುವುವು.

—೦೦೦—

ಬೆಲ್ಜಿಯಮಿನ ನಿರ್ಧಾರ

ಬೆಲ್ಜಿಯಮಿನ ಪ್ರಧಾನ ಮಂತ್ರಿಗಳಾದ ವೇನ್‌ಝೀಲೇಂಡರು ಲೋಕಾರ್ನೋ ಒಪ್ಪಂದಕ್ಕೆ ಸರಿಯಾಗಿ ತಾವು ವರ್ತಿಸುವುದಾಗಿಯೂ, ಬ್ರಿಟನ್ ಮತ್ತು ಫ್ರಾನ್ಸ್‌ಗಳೊಡನೆ ಸೇರಿ ತಾವು ಕೆಲಸ ಮಾಡುವುದಾಗಿಯೂ ತಿಳಿಸಿದರು.

—೦೦೦—

ಡಚ್ ಸರ್ಕಾರದ ಮುಂಜಾಗ್ರತೆ.

ಡಚ್ ಸರ್ಕಾರದ ಪ್ರಧಾನ ಮಂತ್ರಿಗಳು ತಮ್ಮ ರಾಜ್ಯದ ಸೇನೆಗಳನ್ನು ತಯಾರಾಗಿರುವಂತೆ ಆಜ್ಞೆ ಮಾಡಿದ್ದಾರೆ. ಕಾಲಾಳು ಮತ್ತು ಬೈಸಿಕಲ್ ಸೇನಾವಿಭಾಗಗಳು ಸದಾ ಉದ್ಯೋಗದಲ್ಲಿರುವಂತೆ ಹುಕುಂ ಕೊಟ್ಟಿರುವರು ಯೂರೋಪಿನ ಪ್ರಕೃತದ ರಾಜಕೀಯ ಪರಿಸ್ಥಿತಿಯೇ ಇದಕ್ಕೆ ಕಾರಣ.

—೦೦೦—

ಷಾಹಿದ್‌ಗಂಜ್ ಜಳವಳದಿಂದ ಸರ್ಕಾರಕ್ಕೆ ನಷ್ಟ.

ಷಾಹಿದ್‌ಗಂಜ್ ಜಳವಳದಿಂದಾಗಿ ಪಂಜಾಬಿನ ಸರ್ಕಾರಕ್ಕೆ ರೂ. 2,75 000 ಖರ್ಚಾಗಿದೆಯೆಂದು ಸರ್ಕಾರದ ಅರ್ಥ ಸಚೀವರಾದ ಸರ್ ಜೋನಾಲ್ಡ್ ಜೋಯ್ಸ್‌ರವರು ಪಂಜಾಬಿನ ನ್ಯಾಯವಿಧಾಯಕ ಸಭೆಯಲ್ಲಿ ತಿಳಿಸಿದರು.

—೦೦೦—

ಧೈರ್ಯಶಾಲಿಯಾಗುವಂತೆ ಚಿಕಿತ್ಸೆ.

ಜಪಾನಿನ ಓರ್ವ ವೈದ್ಯರು ಅಂಜುಬುರುಕರನ್ನು ಧೈರ್ಯಶಾಲಿಗಳಾಗುವಂತೆ ಮಾಡಲು ಒಂದು ಔಷಧವನ್ನು ಕಂಡು ಹಿಡಿದಿರುವರಂತೆ! ಈ ಔಷಧವನ್ನು ಅಂಜುಬುರುಕನ ರಕ್ತಕ್ಕೆ 'ಇಂಜಕ್ಷನ್' ಮೂಲಕ ಸೇರಿಸುವರಂತೆ. ಅನುತರ ಅವನು ತುಂಬಾ ಧೈರ್ಯಶಾಲಿಯಾಗುವನಂತೆ. ಹೀಗೆ ಉಂಟಾದ ಧೈರ್ಯವು ಚಿರಕಾಲ ಇರುವುದಂತೆ!

—೦೦೦—

ಇಂಗ್ಲೆಂಡಿನ ತೆವ್ಸ ನದಿಯ ಸುರಂಗ.

ಇಂಗ್ಲೆಂಡಿನಲ್ಲಿ 3,000.000 ಪೌಂಡು ವೆಚ್ಚವಾಗಿ, 1 ಮೈಲಿಗೆ ಹೆಚ್ಚಾಗಿ ಉದ್ದವಿರುವ 20 ಅಡಿ ವ್ಯಾಸವುಳ್ಳ ಅಲ್ಲಿನ ಎರಡು ಪಟ್ಟಣಗಳನ್ನು ರೈಲ್ವೆಯ ಮೂಲಕ ಜೋಡಿಸಲು ಒಂದು ಸುರಂಗವನ್ನು ತೋಡುವರಾಗಿ ತಿಳಿದುಬರುತ್ತದೆ. ಈ ಸುರಂಗವು ಅಲ್ಲಿನ ತೇವ್ಸ ನದಿಯ ಅಡಿಯಿಂದ ಹಾದು ಹೋಗುವುದು. ಇದೊಂದು ಮಹತ್ತಾದ ಸಾಹಸವೆನ್ನಬಹುದು. ಈ ಸುರಂಗದಲ್ಲಿ ಬೇಕಾದ ಗಾಳಿಯನ್ನು ಹೊರಗಿನಿಂದ ಒದಗಿಸುತ್ತಿರುವರಂತೆ.

—೦೦೦—

ಸಮುದ್ರದಲ್ಲಿನ ನೀರು ಉಪ್ಪಾಗಲು ಕಾರಣವೇನು?

ಸಮುದ್ರದ ನೀರು ಉಪ್ಪಾಗಲು ಕಾರಣ ಅದಕ್ಕೆ ಸೇರುವ ನದಿಗಳಿಂದ. ಈ ನದಿಗಳು ಭೂಮಿಯ ಮೇಲಿಂದ ಹರಿದುಕೊಂಡು ಬರುತ್ತಿರುವಾಗ ಅನೇಕ ಲವಣಗಳನ್ನು ಕರಗಿಸಿ ಬರುತ್ತವೆ. ಸೂರ್ಯನ ಬಿಸಿಲಿಗೆ ಸಮುದ್ರದ ನೀರು ಆವಿಯಾಗಲು ಸಮುದ್ರದ ಉಪ್ಪಿನಂಶವು ಅಧಿಕವಾಗುತ್ತದೆ. ಸಮುದ್ರದ ಪ್ರತಿಯೊಂದು ಗೆಲನ್ ನೀರಿನಲ್ಲಿ 4 ಔನ್ಸು ಉಪ್ಪಿರುತ್ತದೆ. ಸಮುದ್ರದಿಂದ ಎಲ್ಲಾ ಉಪ್ಪು ತೆಗೆಯುವುದಾದರೆ ಅದನ್ನು ಶೇಖರಿಸಿ ಇಡಲು 5 000,000 ಕ್ಯೂಬಿಕ್ ಮೈಲುಗಳ ಪ್ರಮಾಣವಿರುವ ಉಗ್ರಾಣ ಬೇಕಾಗುವುದು.

—೦೦೦—

ಬಿಳಿ ಗುಲಾಮರು.

ಅಮೇರಿಕದಲ್ಲಿ ಗುಲಾಮಗಿರಿಯು ಸಂಪೂರ್ಣವಾಗಿ ನಾಶವಾಗಿಲ್ಲ. ಅದರಲ್ಲಿಯೂ ವಿಶೇಷವೇನೆಂದರೆ ಬಿಳಿ ಜನರನ್ನು ಗುಲಾಮರಾಗಿ ವಿಕ್ರಯಿಸುತ್ತಿದ್ದಾರೆ. ಅಮೇರಿಕದ ಪೊಲೀಸರು 41 ಕಡೆಗಳಲ್ಲಿ ಒಟ್ಟಿಗೆ 71 ಮಂದಿ ಗುಲಾಮರನ್ನು ದಸ್ತಗಿರಿ ಮಾಡಿದ್ದಾರೆ. ದೇಶದ ಎಲ್ಲಾ ಭಾಗಗಳಿಂದಲೂ ಸುಮಾರು 2000 ಮಂದಿ ಹುಡುಗಿಯರನ್ನು ನ್ಯಾಯೋಕ್ತಿಗೆ ತುಂಬಿದುವುದಾಗಿ ಪೊಲೀಸರು ಊಹಿಸುತ್ತಾರೆ.

—೦೦೦—

ಎರಡಾಣೆ ಕಮ್ಮತ್ತಿನ ಟೆಲಿಗ್ರಾಮುಗಳು.

ಹದಿನೈದು ಶಬ್ದಗಳಿಂದ ಕೂಡಿದ ಟೆಲಿಗ್ರಾಮು (ಎಡ್ರೆಸು ಕೂಡ) ಬರೆ ಎರಡಾಣೆ ಕೊಟ್ಟಲ್ಲಿ ಜಪಾನಿನ ಟೊಕಿಯೊದಿಂದ ಜಪಾನಿನ ಯಾವತ್ತೂ ಭಾಗಗಳಿಗೂ, ನಾಲ್ಕಾಣೆ ಕೊಟ್ಟಲ್ಲಿ ಬಹಿರ್ ದೇಶಗಳಾದ ಮಂಚೂರಿಯಾ ಇತ್ಯಾದಿಗಳಿಗೂ ಕಳುಹಿಸಬಹುದಂತೆ! ನಾಲ್ಕಾಣೆ ಕೊಟ್ಟಲ್ಲಿ ಟೆಲಿಗ್ರಾಮುಗಳನ್ನು ರೇಡಿಯೊ ಮೂಲಕ ಅಲ್ಲಲ್ಲಿ ಸಂಚರಿಸುತ್ತಿರುವ ಜಪಾನಿಯ ನೌಕೆಗಳಿಗೆ ಕಳುಹಿಸಬಹುದಂತೆ. ನವವರ್ಷದ ಸಂದೇಶಗಗಳನ್ನು ಕಳುಹಿಸಲು ಜಪಾನಿಯ ಸರಕಾರವು ವಿಶೇಷ ರಿಯಾಯಿತಿ. ಅಲ್ಲಿಯ ಸಹಜವಾದ ದರವು ನಾಲ್ಕಾಣೆ (15 ಶಬ್ದಗಳು ಮತ್ತು ಎಡ್ರೆಸು)

—೦೦೦—

ಹಿಂದೂ ದೇಶದಲ್ಲಿ ಅಮೇರಿಕನ್ ಪ್ರವಾಸಿಗಳು.

ಅಮೇರಿಕಾದ ಕೆಲವು ಮಹನೀಯರು ಈಗ ಹಿಂದೂ ದೇಶವನ್ನು ಸಂಚಾರಮಾಡುತ್ತಿದ್ದಾರೆ. ಇವರ ತಂಡವೊಂದು ಮೊನ್ನೆ ಒಂದು ಸ್ಪೆಶ್ಯಲ್ ಟ್ರೈನಿನಲ್ಲಿ ಮದ್ರಾಸಿಗೆ ಬಂದಿತ್ತು. ಹಿಂದೂದೇಶವನ್ನು ಕುರಿತು ಬಹಳ ತೃಪ್ತಿಪಡೆದಿರುತ್ತಾರೆ. ಇವರಲ್ಲೊಬ್ಬರು ಹಿಂದೂ ದೇಶವನ್ನು ಕುರಿತು ಅಮೇರಿಕಾದಲ್ಲಿ ಪ್ರಸಿದ್ಧಿಯಲ್ಲಿರುವ ಗ್ರಂಥಗಳು ಅದರ ನಿಜವಾದ ಚಿತ್ರಕೊಡುವುದಿಲ್ಲವೆಂದೂ, ಹಿಂದೂ ದೇಶದ ನಿಜವಾದ ಚಿತ್ರಗಳನ್ನು ಕೊಡುವ ಗ್ರಂಥಗಳು ಬೇಕಾಗಿವೆ ಎಂದೂ, ಮಿಸ್ ಮೆಯೋಳ ಪುಸ್ತಕವು ಅವರಲ್ಲಿ ಅನೇಕ ತಪ್ಪಭಿಪ್ರಾಯಗಳನ್ನು ಉಂಟುಮಾಡಿರುತ್ತದೆಂದೂ ತಿಳಿಸಿದರು. ಅಮೇರಿಕಾವು ಪೌರ್ವಾತ್ಯದ ಕಲಹದಲ್ಲಿ ಕೈಹಾಕುವುದಿಲ್ಲವೆಂದು ಇವರಿಂದ ತಿಳಿದುಬಂತು. ಹಿಂದೂದೇಶದ ಪತ್ರಿಕೆಗಳನ್ನು (ಆಂಗ್ಲೇಯ ವಾರ್ತ) ಬಹಳ ಕೊಂಡಾಡಿದರು. ಮಹಾತ್ಮ ಗಾಂಧಿಯವರ ಅಭಿವು ಸಮಸ್ತ ಅಮೇರಿಕಾ ಖಂಡಕ್ಕೂ ಇರುವುದೆಂದು ಇವರಿಂದ ತಿಳಿದುಬಂತು. ಹಿಂದೂ ದೇಶದ ಪ್ರಾಚೀನ ವೈಭವಗಳನ್ನು ನೋಡಿ ಇವರು ಬೆರಗಾಗಿಯುವರು.

—೦೦೦—

ಕೊಡಗು ಡಿಸ್ಟ್ರಿಕ್ಟ್ ಬೋರ್ಡು ವಿಷಯಗಳು.

ಈ ತಾ 17 ನೇ ಮಂಗಳವಾರ ಕೊಡಗು ಕೌನ್ಸಿಲು ಹಾಲ್‌ನಲ್ಲಿ ರಾ. ಸಾ ಪಾಂಡಂಡ ಚಂಗಪ್ಪನವರ ಅಧ್ಯಕ್ಷತೆಯಲ್ಲಿ ಸೇರಿತು ಸದಸ್ಯರುಗಳೆಲ್ಲರೂ ಹಾಜರಾಗಿದ್ದರು.

(1) ಸಾರ್ವಭೌಮ ಐದನೇ ಜಾರ್ಜ್ ಚಕ್ರವರ್ತಿಗಳ ನಿಧನಕ್ಕೆ ಸಂತಾಪ ಸೂಚಿಸುವ ಮತ್ತು ಈಗಿನ ಚಕ್ರವರ್ತಿಗಳಾದ ಎಂಟನೇ ಎಡ್ವರ್ಡ್ ಚಕ್ರವರ್ತಿಗಳಲ್ಲಿ ರಾಜಭಕ್ತಿಯನ್ನು ಸೂಚಿಸುವ ತರಾವು ಅಧ್ಯಕ್ಷರಿಂದ ಸೂಚಿಸಲ್ಪಟ್ಟು ವಿರೋಧವಿಲ್ಲದೆ ಪಾಸಾಯಿತು.

(2) 1936—37 ನೇ ವರ್ಷದ ಆದಾಯ ವೆಚ್ಚಗಳ ಬಜೆಟ್ಟನ್ನು ಕುರಿತು ಚರ್ಚೆ ಪ್ರಾರಂಭವಾಯಿತು

(a) ಡಿ. ಬೊ. ಮೆಂಬರುಗಳ ಪ್ರಯಾಣದ ಭತ್ಯಕ್ಕಾಗಿ ರೂ. 2000 ಬಜೆಟ್ಟಿನಲ್ಲಿ ತೋರಿಸಿರುವದನ್ನು 1500 ಕ್ಕೆ ಇಳಿಸಬೇಕೆಂದು ಮೆ. ಯಸ್. ಯನ್. ರಾಮಶೆಟ್ಟಿಯವರು ಸೂಚಿಸಿದರು. ಸ್ವಲ್ಪ ಚರ್ಚೆಯಾದ ನಂತರ ಸೂಚನೆಯು ಸ್ವೀಕೃತವಾಯಿತು.

(b) ಔಷಧಗಳಿಗೂ ಮತ್ತು ವೈದ್ಯಕೀಯ ಉಪಕರಣಗಳಿಗೂ ಇಡಲ್ಪಟ್ಟಿರುವ ರೂ 12,050 ಗಳ ವಿಷಯದಲ್ಲಿ ಸರ್ಕಾರದವರು ಧಾರಾಳವಾಗಿ ಹಣ ಸಹಾಯ ಕೊಡಬೇಕೆಂದೂ ಇಲ್ಲವಾದರೆ ಆ ಇಲಾಖೆಯನ್ನು ಸರ್ಕಾರದವರೇ ವಹಿಸಿಕೊಳ್ಳಬೇಕೆಂದೂ ರಾ. ಬ. ಅಪ್ಪಾರಂಡ ಚಂಗಪ್ಪನವರು ಸೂಚಿಸಿದರು. ಮೆ. ಯಸ್. ಯನ್. ರಾಮಶೆಟ್ಟಿಯವರು 'ಸರಕಾರದವರು ಧಾರಾಳ ಹಣ ಸಹಾಯ ಕೊಡಬೇಕೆಂದು' ತರಾವನ್ನು ತಿದ್ದುಪಡಿಮಾಡಿದರು. ತಿದ್ದುಪಡಿ ಪಾಸಾಯಿತು.

(c) ಗ್ರಾಮಾಂತರ ರಸ್ತೆಗಳ ರಿಪೇರಿಗಾಗಿ ರೂ. 13 000 ಇರುವದನ್ನು 14,5000 ಕ್ಕೆ ಏರಿಸಬೇಕೆಂದು ಮೆ. ಸಿ. ಕೆ. ತಮ್ಮಯ್ಯನವರು ಸೂಚಿಸಿದರು. ೫ ಕಮಿಷನರವರು ರೂ 16 000 ಬಜೆಟ್ಟಿನಲ್ಲಿ ಇಡಬೇಕೆಂದು ಸೂಚಿಸಿ ಅದರಂತೆಯೇ ಪಾಸಾಯಿತು.

(d) ಹೊಳೆಗಳಿಗೆ ಪಾಲಗಳನ್ನು ಹಾಕಲು ಬಜೆಟ್ಟಿನಲ್ಲಿನಿಯಮಿತವಾಗಿರುವ ರೂ. 1000 ರೂ. 1300 ಕ್ಕೆ ಏರಿಸಬೇಕೆಂದು ಆ ಕಮಿಷನರವರು ಸೂಚಿಸಿದ್ದನ್ನು ಒಪ್ಪಲಾಯಿತು.

(e) ಪಿ. ಡಬ್ಲ್ಯು. ಡಿ ಇಲಾಖೆಯ 1936—37 ವರ್ಷದ ಬಜೆಟ್ ಎಸ್ಟಿಮೇಟನ್ನೂ ಪರಾಂಬರಿಸಲಾಯಿತು

ಶಾಲೆಗಳ ಕಟ್ಟೋಣಗಳ ರಸ್ತೆಗಳ ರಿಪೇರಿ ಬಗ್ಗೆ ಬಡೆಟ್ಟಿನಲ್ಲಿ ಕಾಣಿಸಿದ ರೂ. 15,500 ಯನ್ನು 12,500 ಕ್ಕೆ ಇಳಿಸಿ ಏಗ್ಸಿಕ್ಯುಟಿವ್ ಇಂಜಿನಿಯರ್‌ರವರು ಅದನ್ನು ತಮ್ಮ ನಿಷ್ಕರ್ಷೆ ಪ್ರಕಾರ ಖರ್ಚು ಮಾಡುವಂತೆ ತೀರ್ಮಾನಿಸಲಾಯಿತು

ಈ ಬದಲಾವಣೆಗಳಿಂದ 1936—37 ನೇ ವರ್ಷದ ಬಜೆಟ್ಟು ಒಪ್ಪಲಾಯಿತು.

[ಪ್ರಿಂಟಾಗಿರುವ ಬಜೆಟ್ಟಿನಲ್ಲಿ ರೂ. 36,358 ಖರ್ಚು ಆದಾಯವನ್ನು ವಿವರಿಸುತ್ತೆ]

(3) ಸಂವಾಜೆಯಲ್ಲಿ ಪ್ರತಿ ವರ್ಷವೂ ಅಕ್ಟೋಬರ್ 15 ರಿಂದ ಜೂನ್ 15ರ ವರೆಗೆ ವಾರಕ್ಕೊಮ್ಮೆ ಆಸ್ಪತ್ರೆಯನ್ನಿಡಬೇಕೆಂದು ಸಿವಿಲ್ ಸರ್ಜನರು ಕೇಳಿಕೊಂಡಿದ್ದು ಪಾಸಾಯಿತು.

(4) ಖರ್ಚನ್ನು ಸರಿಪಡಿಸಲು ಎಗ್ಸಿಕ್ಯುಟಿವ್ ಇಂಜಿನೀಯರು ಮಾಡಿದ ವ್ಯತ್ಯಾಸಗಳ ಸ್ಟೇಟ್‌ಮೆಂಟನ್ನು ಒಪ್ಪಲಾಯಿತು.

(5) ಕೊಡಗು ಸ್ಕೌಟ್ ಸಂಘಕ್ಕೆ ರೂ. 100 ಕೊಡಬೇಕೆಂದು ಡಿ. ಇನ್ಸ್‌ಪೆಕ್ಟರವರು ಕೇಳಿಕೊಂಡ ಮೇರೆ ಮಂಜೂರು ಮಾಡಲಾಯಿತು.

(6) ಬಿಟ್ಟಂಗಾಲ ಶಾಲಾ ಕಟ್ಟಡವನ್ನು ಗ್ರಾಮಸ್ಥರಿಗೆ ಬಿಟ್ಟು ಕೊಡಲು ಗ್ರಾಮಸ್ಥರು ಬಂಕೊಂಡ ಅರ್ಜಿ ಮೇರೆ ಅವರಿಗೆ ಬಿಟ್ಟುಕೊಡಲಾಯಿತು.

(7) ಕೊಡಗು ಡಿಸ್ಟ್ರಿಕ್ಟ್ ಸ್ಕೌಟು ಕಮಿಷನರವರು ಸ್ಕೌಟಿಂಗ್ ಕಾರ್ಯನಿಮಿತ್ತವಾಗಿ ಪ್ರವಾಸ ಮಾಡುವಾಗ್ಗೆ ಮಂಸಾಫಿರು ಬಂಗ್ಲೆಗಳಲ್ಲಿ ಬಾಡಿಗೆ ಇಲ್ಲದೆ ಅವರಿಗೆ ಇರಲು ಅನುಮತಿ ಕೊಡಬೇಕೆಂದು ಸ್ಕೌಟ್ ಅಸೋಸಿಯೇಷನಿನ ಗವುರವ ಕಾರ್ಯದರ್ಶಿಗಳು ಬಂದ ತಾ. 9ನೇ ಫೆಬ್ರುವರಿಯ ಪತ್ರವನ್ನು ಓದಲಾಗಿ ಅದರಂತೆ ಬಿಟ್ಟುಕೊಡಲು ತೀರ್ಮಾನಿಸಲಾಯಿತು.

(8) ಗೋಣಿಕೊಪ್ಪಲು ಮೂರ್ಕಟ್ಟಿನ ಕಂಟ್ರಾಕ್ಟ್‌ದಾರರಾಗಿದ್ದ ಮೆ. ಡಿ. ಹೆಚ್. ಅಬ್ದುಲ್ ರಹಿಮೊನ್ ಸಾಹೇಬರು ರೂ 100 ಮೊಫಿಬಿಡಬೇಕೆಂದು ಬರಕೊಂಡ ಅರ್ಜಿಯನ್ನು ಓದಿ ಮೊಫಿ ಬಿಡುವಂತೆ ತೀರ್ಮಾನಿಸಲಾಯಿತು

(9) ಬೆಳ್ಳಮೂಡು ಸೇತುವೆಯ ಕೆಲಸವನ್ನು ಪೂರ್ತಿಗೊಳಿಸಲು ರೂ. 2057 ಮಂಜೂರು ಮಾಡಲಾಯಿತು.

(10) ಮೂದಾವುರಕ್ಕೆ ಒಬ್ಬ ಜಾಡುಮಲ್ಲಿಯನ್ನು ಬಿಟ್ಟುಕೊಡಲು ಸಾಧ್ಯವಾಗುವದಿಲ್ಲವೆಂದು ಜಂಬೂರು ತೋಟದ ಮೇನೇಜರು ಬಂದ ಪತ್ರ ಓದಲಾಗಿ, ತಿಂಗಳಿಗೆ ರೂ. 6 ಸಂಬಳದಂತೆ ಒಬ್ಬ ಖಾಯಂ ಜಾಡುಮಲ್ಲಿಯನ್ನು ನೇಮಿಸುವಂತೆ ತೀರ್ಮಾನವಾಯಿತು

(11) ಹೆಬ್ಬಲ್ಲೆಯಲ್ಲಿ ಜೂನ್ 1 ರಿಂದ ಟೋಲುಗೇಟು ತೆರೆಯುವಂತೆ ತೀರ್ಮಾನಿಸಲಾಯಿತು.

(12) ಅಮ್ಮತ್ತಿಯಲ್ಲಿ ಜಾಡುಮಲ್ಲಿಯಾಗಿದ್ದ ಹೆಂಬಿಯು ತನಗೆ ಪಿಂಚಿನು ಕೊಡಬೇಕೆಂದು ಬರೆದ ಅರ್ಜಿ ಓದಲಾಗಿ ಆತನಿಗೆ ನೂರು ತಿಂಗಳ ಸಂಬಳವನ್ನು ಕೊಡುವಂತೆ ಮಂಜೂರಾಯಿತು.

(13) ಡಿ. ಬೊ. ಪ್ರೆಸಿಡೆಂಟರು ತಮ್ಮ ಸ್ವಂತ ಜವಾಬ್ದಾರಿಕೆಯಿಂದ ಮಂಜೂರಾದ ನೊಬಲಗನ್ನು ಖರ್ಚು ಮಾಡುವ ವಿಷಯದಲ್ಲಿ ಎಕೌಂಟೆಂಟ್ ಜನರಲ್‌ರವರು ಬರೆದ ಪತ್ರ ಓದಿ ಮಂಜೂರಾದ ನೊಬಲಗನ್ನು ಡಿ. ಬೊ. ಪ್ರೆಸಿಡೆಂಟರೇ ಚೀಫ್ ಕಮಿಷನರವರ ಅನುಮತಿ ಮೇರೆ ಖರ್ಚು ಮಾಡಬಹುದೆಂದು ತೀರ್ಮಾನವಾಯಿತು.

(14) ತಂಣೀರು ಹಳ್ಳ ಟೋಲುಗೇಟಿನ ಕಟ್ಟಡದ ಸಾಮಾನುಗಳನ್ನು, ಇಂಕನಹಳ್ಳಿಯಲ್ಲಿ ಉದ್ಯೋಗಸ್ಥರಿಗೆ ಉಳಿಕೊಳ್ಳಲು ಒಂದು ಕಟ್ಟಡವನ್ನು ಕಟ್ಟಲ್ಲು ಉಪಯೋಗಿಸಲು ಬಿಡಬೇಕೆಂದು ದಿವಾನ್ಯ ಅಧಿಕಾರಿಗಳ ಕೋರಿಕೆಯನ್ನು ಮಂಜೂರು ಮಾಡಲಾಯಿತು.

(15) ಲೋಕಲ್ ಫಂಡ್ ಆಸ್ಪತ್ರೆಗಳಿಗೆ ಔಷಧಿಗಳನ್ನು ಸರಬರಾಯಿ ಮಾಡಲು ಇನ್ನು ಹೆಚ್ಚು ಹಣ ಕೊಡಲಾಗುವುದಿಲ್ಲವೆಂದು ಚೀಫ್ ಕಮಿಷನರವರ ಸೆಕ್ರೆಟರಿಯವರಿಂದ ಬಂದ ಪತ್ರ ರಿಕಾರ್ಡು ಮಾಡಲಾಯಿತು.

(16) ಮಡಿಕೇರಿ ನಾಡಿನ ಮೊಣಂಗೇರಿ ರಸ್ತೆಯಲ್ಲಿನ (ಕೋಚನ ಮುದ್ದಪ್ಪನವರ ಗದ್ದೆ ಬಳಿ) ತೋಡನ್ನು ತಿರುಗಿಸಲು ರೂ. 30 ಮಂಜೂರು ಮಾಡಬೇಕೆಂದು ಮಡಿಕೇರಿನಾಡು ವಾರುಪತ್ಯಗಾರರು ಬರಕೊಂಡ ಪ್ರಕಾರ ಮಂಜೂರು ಮಾಡಲಾಯಿತು.

(17) ಕದನೂರು ನಾಲ್ಕುನಾಡು ರಸ್ತೆ ಅಂದರೆ 2 ಮೈಲು 6ನೇ ಫರ್ಲಾಂಗಿನಿಂದ ಭಾಗಮಂಡಲ ಡಿ. ಬೋ. ರಸ್ತೆಯ ವರೆಗಿನ ರಸ್ತೆಯ ರಿಪೇರಿ ಬಗ್ಗೆ ಹಣ ಕೊಡಲಾಗುವುದಿಲ್ಲವೆಂದು ಕಮಿಷನರವರು ಬರೆದ ಪತ್ರ ಓದಿ ದಾಖಲೆ ಮಾಡಲಾಯಿತು.

(18) ಡಿ. ಬೋ ಉದ್ಯೋಗಸ್ಥರಿಗೂ ಸರ್ಕಾರಿ ಉದ್ಯೋಗಸ್ಥರುಗಳಿಗೆ ಕೊಡುವಂತೆ ಸಂಬಳದಲ್ಲಿ ಬಡ್ತಿ ವಗೈರೆ ವಗಿರ್ ಮುಂತಾದುಗಳ ವಿಷಯದ ಪತ್ರಗಳನ್ನು ಓದಿ ದಾಖಲೆ ಮಾಡಲಾಯಿತು

(19) ಮೂಡಮುಡಿಯಲ್ಲೂ ಮತ್ತು ತಿತಿಮತಿ ಪೊಳ್ಳ ಬೆಟ್ಟ ರಸ್ತೆಯಲ್ಲೂ (ತಿತಿಮತಿ ಬಳಿ) ಬಾವಿ ತೋಡಲು ಹಣ ಕೊಡಲಾಗುವದಿಲ್ಲವೆಂದು ಕಮಿಷನರವರ ಪತ್ರ ಓದಿ ದಾಖಲೆ ಮಾಡಲಾಯಿತು.

(20) ಡಿ. ಬೋರ್ಡು ಮ್ಯೂನ್ಯುವೆಲಿನಲ್ಲಿನ ಐದನೇ ಅಧ್ಯಾಯದಲ್ಲಿ ಚೀಫ್ ಕಮಿಷನರವರು ಮಾಡಿದ ಕೆಲವು ತಿದ್ದುಪಡಿಗಳನ್ನು ಆಲೋಚಿಸಲು ರೂಲ್ಸ್ ಕಮಿಟಿಗೆ ಬಿಡಲಾಯಿತು.

(21) ರೋಟರಿ ವಿಷನ್ ಬಂದನ್ನು ತರಿಸಬೇಕೆಂಬದನ್ನು ತಿರಸ್ಕರಿಸಲಾಯಿತು.

(22) ನಾಪೋಕ್ಲಿನಲ್ಲಿರುವ ಸೂಲಗಿತ್ತಿಯನ್ನು ಶನಿವಾರಸಂತೆಗೆ ವರ್ಗಾಯಿಸಬೇಕೆಂದು ಸಿವಿಲ್ ಸರ್ಜನರು ಬರೆದದ್ದನ್ನು ಅಂಗೀಕರಿಸಲಿಲ್ಲ.

(23) ಸಬ್—ಅಸಿಸ್ಟೆಂಟ್ ಸರ್ಜನರುಗಳ ಸಂಬಳದ ದರವನ್ನು 50—5—100 ಕ್ಕೆ ಇಳಿಸಬೇಕೆಂಬ ವಿಷಯ ಚರ್ಚೆಯಾಗದೆ ಚೀಫ್ ಕಮಿಷನರವರ ಹೊಸ ಸರ್ಕ್ಯುಲರಿನ ಪ್ರಕಾರ ಅನುಸರಿಸುವಂತೆ ತೀರ್ಮಾನವಾಯಿತು.

(24) ಸಬ್ ಅಸಿಸ್ಟೆಂಟ್ ಸರ್ಜನರುಗಳ ಪರ್ವಾವಧಿಯ ಬಡ್ತಿಯನ್ನು ಸರಕಾರದವರೇ ವಹಿಸಿಕೊಳ್ಳಬೇಕೆಂಬದು ತಿರಸ್ಕರಿಸಲ್ಪಟ್ಟಿತು.

(25) ಗೋಣಿಕೊಪ್ಪಲು ಮೈಸೂರು ರೋಡಿನ ಒಂಟಿಯಂಗಡಿಯಲ್ಲೂ ಮತ್ತು ಬಿಳೂರಿನಲ್ಲೂ ಬಾವಿತೋಡಿಸಿಕೊಡಬೇಕೆಂದದಕ್ಕೆ ಸರಕಾರದವರಿಂದ ಬಂದ ಜವಾಬುಗಳನ್ನು ದಾಖಲೆಮಾಡಲಾಯಿತು.

(26) ನೊಖ್ಯ ಹೊಳೆಗೂ ಮತ್ತು ಕೀರೆ ಹೊಳೆಗೂ ಪಾಲ ಹಾಕಿಸಬೇಕೆಂದು ಮೆ. ಕಾಡ್ಯಮಾಡ ಪೆನ್ಮಯ್ಯನವರ ತರಾವಿನ ಮೇರೆ ಪ್ರತಿಯೊಂದು ಪಾಲಕ್ಕು ರೂ. 10 ರಂತೆ ಮಂಜೂರು ಮಾಡಲಾಯಿತು.

(27) ಸಬ್—ಅಸಿಸ್ಟೆಂಟ್ ಸರ್ಜನರುಗಳನ್ನು ಒಂದು ಸ್ಥಳದಲ್ಲಿ ಮೂರು ವರ್ಷಗಳಿಗಿಂತ ಹೆಚ್ಚು ಅವಧಿ ಇಡಬಾರದೆಂಬ ಮೆ. ಐನಂಡ ಕಾರ್ಯಪ್ಪನವರ ತರಾವು ಚರ್ಚೆಗೆ ಬಂದು ಸಿವಿಲ್ ಸರ್ಜನರು ಆ ತತ್ವವನ್ನೇ ಅನುಸರಿಸುತ್ತಿರುವದಾಗಿ ಎಂದು ಭರವಸೆ ಕೊಟ್ಟದ್ದರಿಂದ ಅವರ ನಿಷ್ಕರ್ಷೆ ಪ್ರಕಾರ ವರ್ಗ ಮಾಡುವಂತೆ ತೀರ್ಮಾನಿಸಲಾಯಿತು.

(28) ಶನಿವಾರಸಂತೆ ಮೂರ್ಕಟ್ಟು ಒಹಳ ಕಡಿಮೆ ಮೊತ್ತಕ್ಕೆ ಹರಾಜಾಗಿರುವದರಿಂದಲೂ ರೂ. 2400 ನವರೆಗೆ ಇತರರು ತೆಗೆಯುವವರಿಯುವದರಿಂದಲೂ ಆ ಮೂರ್ಕಟ್ಟನ್ನು ಮತ್ತೊಮ್ಮೆ ಹರಾಜು ಮಾಡಬೇಕೆಂಬ ಮೆ. ಸಿ. ಜಿ. ಕಾಳೇಗೌಡರ ತರಾವು ಚರ್ಚೆಗೆ ಬಂದು ಮೊದಲಿನ ಹರಾಜನ್ನೇ ಖಾಯಂ ಮಾಡುವಂತೆ ತೀರ್ಮಾನಿಸಲಾಯಿತು.

(29) ಕಕ್ಕಬೆ ಸ್ಕೂಲ್ ಕಟ್ಟಡಕ್ಕೆ ರೂ. 2000 ಮಂಜೂರು ಮಾಡಬೇಕೆಂದು ಮೆ. ಉದಿಯಂಡ ಪೂಜಪ್ಪನವರು ತಂದ ತರಾವು ಪಾಸಾಯಿತು.

(30) ಡಿ. ಬೋ. ಕೆಲಸಗಳಿಗೆ ಹಣ ಇಲ್ಲದ್ದರಿಂದ ಸ್ಥಳೀಯ ಸರ್ಕಾರದವರು ರೂ. 2 ಲಕ್ಷ ಸಾಲ ಕೊಡಬೇಕೆಂದು ರಾ. ಬ. ಅಪ್ಪಾರಂಡ ಚಂಗಪ್ಪನವರು ಸೂಚಿಸಿದರು. ಮೆ. ಯಸ್. ಯನ್. ರಾಮಶೆಟ್ಟಿಯವರು ಅನುಮೋದಿಸಿದರು, ತರಾವು ಪಾಸಾಯಿತು.

(31) ಬಲಮುರಿ, ಕೆಲಕೆರಿಡ್ಡಿ ಮತ್ತು ಇಪ್ಪುಗಳಲೆಗಳಲ್ಲಿಗೆ ಮೂರು ದೋಣಿಗಳನ್ನು ಕೊಂಡುಕೊಳ್ಳಲು ತೀರ್ಮಾನವಾಯಿತು.

(32) ಈ ವರ್ಷದ ಟೋಲುಗೇಟುಗಳ ಹರಾಜುಗಳನ್ನು ಖಾಯಂ ಮಾಡಲಾಯಿತು.

(33) ಆಫೀಸಿನ ಮೂರನೇ ಕ್ಲಾರ್ಕರು ಹೊಸ ದರದ ಪ್ರಕಾರ ಸಂಬಳ ಕೊಡಬೇಕೆಂದು ಬರಕೊಂಡ ಅರ್ಜಿಯನ್ನು ತಿರಸ್ಕರಿಸಲಾಯಿತು.

(34) ಪ್ಲೇಗಿನ ದೆಸೆಯಿಂದ ತನಗೆ ನಷ್ಟವಾಯಿತೆಂದು ನೂದಾಪುರ ಮೂರ್ಕೆಟು ಕಂಟ್ರಾಕ್ಟ್‌ದಾರನು ಬರಕೊಂಡ ಅರ್ಜಿ ಮೇರೆ ರೂ. 60 ಮೊಫಿ ಬಿಡುವಂತೆ ತೀರ್ಮಾನಿಸಲಾಯಿತು.

(33) ಅಬ್ದುಲ್ ರಹಿಮೊನ್ ಖಾನ್‌ರವರ ತರಾವು ಮೇರೆ ಅಂಜುಮನ್ ಸಂಘಕ್ಕೆ ವಿದ್ಯಾ ಪ್ರಸಾರಕ್ಕಾಗಿ ರೂ. 100 ಮಂಜೂರು ಮಾಡಲಾಯಿತು.

ಸ್ಥಳೀಯ ಸರ್ಕಾರದಿಂದ ಸಾಲ ಕೇಳಿರುವುದರಿಂದ ಬಾಕಿ ಎಲ್ಲ ತರಾವುಗಳನ್ನು ಸಾಲಸೋತ ನಂತರ ಆಲೋಚಿಸುವಂತೆ ತೀರ್ಮಾನವಾದ್ದರಿಂದ ಸದಸ್ಯರುಗಳು ಕಳುಹಿಸಿದ್ದ ಬಾಕಿ ತರಾವುಗಳೊಂದೂ ಚರ್ಚೆಗೆ ಬರಲಿಲ್ಲ.

ಆರೋಗ್ಯ ವಿಚಾರ.

ಎನಾಮಲ್ ಪಾತ್ರೆಗಳಲ್ಲಿ ಆಂಟಿಮೊನಿ ಎಂಬ ಲೋಹ ವಿಷ.

ಕೆಲವು ಕಾರ್ಖಾನೆಯವರು ಟಿನ್ ಆಕ್ಸೈಡಿಗೆ ಬದಲಾಗಿ ಅಗ್ಗವಾಗಿ ಸಿಕ್ಕುವ ಆಂಟಿಮೋನಿ ಎಂಬ ಲೋಹದ ಆಕ್ಸೈಡುಗಳನ್ನು ತಯಾರಿಸಿ ಎನಾಮಲ್ ಪಾತ್ರೆಗಳನ್ನು ತಯಾರಿಸುವರು. ಇಂಥಾ ಪಾತ್ರೆಗಳ ಉಪಯೋಗದಿಂದ ಅನೇಕ ವೇಳೆ ದೇಹಕ್ಕೆ ವಿಷಸಂಬಂಧ ಉಂಟಾಗುವುದು. ಈ ಎನಾಮಲ್ ಪಾತ್ರೆಗಳಿಗೆ ಉಪಯೋಗಿಸುವಂಥಾ ಆಂಟಿಮೊನಿ ಲೋಹದಲ್ಲಿ ಟ್ರೈಯಾಕ್ಸೈಡುಗಳು ಸಿಟ್ರಿಕ್ ಟಾರ್ಟರಿಕ್ ಆಸಿಡುಗಳಲ್ಲಿ ಬಹು ಬೇಗನೆ ಕರಗತಕ್ಕ ಸ್ವಭಾವವುಳ್ಳವು. ಲೆಮನೇಡ್ ಮುಂತಾದ ಹುಳಿಯು ಪಾನೀಯಗಳನ್ನು ಮಾಡುವುದಕ್ಕೆ ಆ ಪಾತ್ರೆಗಳು ಉಪಯೋಗಿಸಲ್ಪಡುವವು. ಇಂಥಾ ಪಾನೀಯಗಳನ್ನು ಆ ವಿಧವಾದ ಎನಾಮಲ್ ಪಾತ್ರೆಗಳಲ್ಲಿ ತುಂಬಿಟ್ಟರೆ ಆ ಆಂಟಿಮೊನೀ ಲೋಹದ ಟ್ರೈಯಾಕ್ಸೈಡನ್ನು ಕರಗಿಸಿಬಿಟ್ಟು ವಿಷಸಂಬಂಧವನ್ನು ತಂದಿಡುವುದು. ಈ ವಿಷಗಳು ಕಠಿಣ ಮತ್ತು ಕಗ್ಗುಳು ಈ ಮೂಗ್ರಗಳಲ್ಲಿ ಉರಿಯನ್ನು ಹೆಚ್ಚಿಸಿ, ವಾಂತಿ ಮೊದಲಾದ ತೀವ್ರ ಬಾಧೆಗಳಿಗೆ ಕಾರಣವಾಗುವುದು. ಕೆಲವು ವೇಳೆ ಈ ವಿಷಸಂಬಂಧದಿಂದ ಥಟ್ಟನೆ ಮರಣವೂ ಉಂಟಾಗಬಹುದು ಇವಕ್ಕಾಗಿ ಮಿನಿಸ್ಟ್ರಿ ಆಫ್ ಹೆಲ್ತ್ ಎಂಬ ಇಲಾಖೆಯವರು ಇಂತಹ ಅಗ್ಗವಾದ ಎನಾಮಲ್ ಪಾತ್ರೆಗಳನ್ನು ಉಪಯೋಗಿಸಬಾರದೆಂದು ಜನರಿಗೆ ಎಚ್ಚರಿಸುತ್ತಿರುವರು.

ಕಾಫಿಯಿಂದ ಗಂಡಸರಿಗಿಂತ ಹೆಂಗಸರಿಗೆ ಹೆಚ್ಚು ಅಪಾಯವು.

ಕಾಫಿಯಿಂದ ಗಂಡಸರಿಗಿಂತಲೂ ಹೆಂಗಸರಿಗೆ ಹೆಚ್ಚು ಅಪಾಯವುಂಟು. ಇದು ಮಿಚಿಗನ್ ವಿಶ್ವವಿದ್ಯಾಲಯದ ವೈದ್ಯಕಲಾ ಶಾಲೆಗೆ ಸೇರಿದ ಡಾಕ್ಟರ್ ಕ್ಯಾಥರಿನ್ ಹೋರ್ಸ್, ಮತ್ತು ಡಾಕ್ಟರ್ ಜೆ ರಾಬರ್ಟ್‌ಎಲ್ಲನ್ ಇವರಿಬ್ಬರೂ ನಡೆಸಿದ ಪರಿಶೋಧನೆಗಳಿಂದ ವ್ಯಕ್ತವಾಗುವುದು. ಮತ್ತು ಅವರು ಈ ವಿಚಾರವನ್ನು ಅಮೆರಿಕಾ ದೇಶದ ಫಾರ್ಮಕಾಲಜಿ ಎಂಡ್ ಎಕ್ಸ್‌ಪರಿಮೆಂಟಲ್ ಥೀಪ್ಯೂಟಿಕ್ಸ್ (ಸೈನ್ಸ್ ಸರ್ವಿಸ್) ಎಂಬ ಸಂಘಕ್ಕೂ ತಿಳಿಸಿರುವರು. ಇವರು ಏಳು ಮಂದಿ ಗಂಡಸರನ್ನೂ ಏಳು ಮಂದಿ ಹೆಂಗಸರನ್ನೂ ವಾರಕ್ಕೆ ಒಂದೇ ದಿವಸ ಕಾಫಿ ಕುಡಿಯುವಂತೆ ನಿರ್ಣಯಿಸಿದರು. ಉಳಿದ ಆರು ದಿನಗಳಲ್ಲಿಯೂ ಅವರು ಕಾಫಿನ್ ಇಲ್ಲದ ಕಾಫಿಯನ್ನು ಕುಡಿಯುತ್ತಾ ಬಂದರು. ಹೀಗೆ ಕೆಲವು ವಾರಂಗಳ ವರೆಗೆ ನಡೆಯಿತು.

ಅವರು ಆ ಹದಿನಾಲ್ಕು ಮಂದಿಯ ಕೈಬೆರಳಿನ ನಡುಕವನ್ನು ಜಾಗ್ರತೆಯಾಗಿ ಅಳತೆ ಮಾಡಿ ಅದರಿಂದ ಕಾಫಿ ಕುಡಿದ ಗುಣ ದೋಷಗಳನ್ನು ನಿರ್ಣಯಿಸಿದರು. ನಿಮಿಸವೊಂದಕ್ಕೆ ಅಗತ್ಯ ತೋರಬರುವ ನಡುಕಗಳಲ್ಲಿ ವ್ಯತ್ಯಾಸ ಉಂಟಾಗಲಿಲ್ಲ. ಆದರೆ ಕಾಫಿ ಕುಡಿದ ಮೇಲೆ ಕೆಲವು ಗಂಟೆಗಳ ಕಾಲದ ವರೆಗೆ ಆ ನಡುಕದ ವೇಗವು ಮಾತ್ರ ಹೆಚ್ಚಾಗಿದ್ದಿತು. ಗಂಡಸರಲ್ಲಿ ಇಂತಹ ಚಿಹ್ನೆಗಳುಂಟಾಗುವುದಕ್ಕೆ ಸ್ತ್ರೀಯರಿಗಿಂತ ಎರಡು ಪಾಲು ಕೆಫೀನ್ ಬೇಕಾಗುವುದೆಂದು ತಿಳಿಯಬಂದಿತು.

'ರಾ. ಬ.'

ಕೊಡಗು

ಮಾರ್ಚ್ ತಾ. ೨೦ ನೇ ಶುಕ್ರವಾರ ೧೯೩೬.

ಬಸ್ಸು ಚಾರ್ಜಿನ ದರಗಳು.

ಬೆಟ್ಟಗುಡ್ಡಗಳ ನೀಮೆಯೂದ ಕೊಡಗಿನಲ್ಲಿ ಪ್ರಯಾಣದ ಅನುಕೂಲತೆಯು ಒಹು ಕಡಿಮೆಯಾಗಿದೆ. ಬೇರೆ ಕಡೆಗಳಲ್ಲಿರುವಂತೆ ಇಲ್ಲಿ ರೈಲ್ವೆಗಳ ಮತ್ತು ಟ್ರಾಮ್ವೆಗಳ ಅನುಕೂಲತೆ ಇಲ್ಲ. ಇಲ್ಲಿ ಇತ್ತೀಚೆಗೆ ಬಸ್ಸು ಸರ್ವಿಸುಗಳ ಅನುಕೂಲತೆ ಮಾತ್ರ ದೊರಕಿದೆ. ಜನ ಸಾಮಾನ್ಯರು ನಡೆಸುಕೊಂಡು ಹೋಗುವುದನ್ನು ಬಿಟ್ಟರೆ ಬಸ್ಸುಗಳ ಮೂಲಕ ಮಾತ್ರ ಪ್ರಯಾಣ ಮಾಡಬಲ್ಲರಾದ ಕಾರಣ ಬಸ್ಸ್ ಸರ್ವಿಸುಗಳ ವಿಚಾರಕ್ಕೆ ಸರ್ಕಾರದವರು ತುಂಬಾ ಗಮನಕೊಡಬೇಕಾಗಿದೆ.

ಈಗ ಜಾರಿಯಲ್ಲಿರುವಂತೆ ಬಸ್ಸ್ ಸರ್ವಿಸುಗಳು ವ್ಯಾಪಾರದ ದೃಷ್ಟಿಯಿಂದ ಮತ್ತು ಲಾಭದ ಆಶೆಯಿಂದ ನಡಿಸಲ್ಪಡುತ್ತಿರುವದಾಗಿದೆ. ಆದರೆ ದೇಶದ ಜನರ ಪ್ರಯಾಣಕ್ಕೂ, ಸಾಮಾನುಗಳ ಒಯ್ಯೂಟಕ್ಕೂ ತಕ್ಕ ಏರ್ಪಾಡುಗಳನ್ನು ಮಾಡುವುದು ಸರ್ಕಾರದವರ ಕರ್ತವ್ಯವಾಗಿದೆ. ಆದುದರಿಂದಲೇ ಸರ್ಕಾರದವರು ಕೆಲವು ರೈಲ್ವೆಗಳನ್ನು ನಡಿಸುತ್ತಿರುವುದಲ್ಲದೆ ಬೇರೆ ರೈಲ್ವೆ ಮತ್ತು ಸ್ಟೀಮರು ಕಂಪೆನಿಗಳ ಮೇಲೆ ಅಧಿಕಾರವನ್ನು ಇಟ್ಟುಕೊಂಡಿರುವುದಾಗಿದೆ. ಅಲ್ಲದೆ ಬಸ್ಸ್ ಸರ್ವಿಸುಗಳ ಮೇಲೂ ಕೆಲವು ನಿರ್ಬಂಧಗಳನ್ನು ಹಾಕಿರುವದಾಗಿದೆ. ಬಸ್ಸು, ಲಾರಿ, ಕಾರುಗಳ ವ್ಯೆವಾಟದಿಂದ ರಸ್ತೆ ಟಿಪ್ಪಿಂಗೆ ಆಗುತ್ತಿರುವ ಹೆಚ್ಚಿನ ಖರ್ಚನ್ನು ಭರ್ತಿ ಮಾಡಲು ಈ ವಾಹನಗಳ ಮೇಲೆ ಸರ್ಕಾರದವರು ದೊಡ್ಡ ತೆರಿಗೆಗಳನ್ನು ಹಾಕಿರುವುದು ನಿಜ. ಇದು ಉತ್ಪತ್ತಿಯ ದೃಷ್ಟಿಯಿಂದಾಗಿದೆ. ಆದರೆ ವಾಹನಗಳ ಶಕ್ತಿಗನುಸಾರ ನಿಶ್ಚಯಿಸಿದಕ್ಕಿಂತ ಹೆಚ್ಚು ಪ್ರಯಾಣಿಕರನ್ನಾಗಲೀ, ಸಾಮಾನುಗಳನ್ನಾಗಲೀ ಒಯ್ಯಕೂಡದೆಂತಲೂ, ನಿಯಮ ಮಾಡಿದ ವೇಗಕ್ಕಿಂತ ಜೋರಾಗಿ ಓಡಿಸಕೂಡದೆಂತಲೂ, ನಿರ್ಣಯಮಾಡಿದ ಸಮಯ ತಪ್ಪಿ ನಡಿಸಕೂಡದೆಂತಲೂ ಸರ್ಕಾರದವರು ನಿಬಂಧನೆ ಮಾಡಿರುವುದು ಪ್ರಯಾಣ ಸ್ಥಿರ ಹಿತದ ದೃಷ್ಟಿಯಿಂದಾಗಿದೆ. ಮಾತ್ರವಲ್ಲ ಮೈಲಿಗೆ ಒಂದೂವರೆ ಆಣೆಗಿಂತ ಹೆಚ್ಚು ಚಾರ್ಜು ಮಾಡಕೂಡದೆಂದು ನಿಶ್ಚಯಿಸಿರುವುದೂ ಜನಸಾಮಾನ್ಯದವರ ಪ್ರಯೋಜನಕ್ಕಾಗಿಯಾಗಿದೆ. ಮೊದಲು ಬಸ್ಸು ಸರ್ವಿಸುಗಳ ಸಂಖ್ಯೆಯು ಒಹು ಕಡಿಮೆಯಾಗಿದ್ದು, ಪೈಪೋಟಿಗೆ ಎಡೆ ಇಲ್ಲದ್ದರಿಂದ ಹೆಚ್ಚು ಚಾರ್ಜು ಮಾಡದಂತೆ ಇಂಥಾ ನಿಯಮವನ್ನು ಇಟ್ಟದ್ದಾಗಿದೆ. ಚಾರ್ಜು ಕಡಿಮೆ ಮಾಡಿದಷ್ಟು ಪ್ರಯಾಣೀಕರಿಗೆ ಅನುಕೂಲವಾಗುವದೆಂಬ ಭಾವನೆಯಿಂದ ಕಮ್ಮಿ ಚಾರ್ಜಿನ ನಿಯಮವನ್ನು ಆಗ್ಗೆ ಮಾಡದೆ ಇದ್ದಿರಬಹುದಾಗಿ ತೋರುತ್ತದೆ. ಆದರೆ ಇತ್ತಲಾಗಿ ಬಸ್ಸು ಸರ್ವಿಸುಗಳ ಸಂಖ್ಯೆಯು ಹೆಚ್ಚುತ್ತಾ ಬಂದು ಸ್ಪರ್ಧೆಗೆ ತುಂಬಾ ಅವಕಾಶವಾಗಿರುವುದರಿಂದ ಹೆಚ್ಚಿನ ದರದ ನಿಯಮಿಗಿಂತ ಕಡಿಮೆ ದರದ ನಿಯಮಿನ ಅವಶ್ಯಕತೆಯು ಕಂಡು ಬರುತ್ತದೆ.

ಒರೇ ವ್ಯಾಪಾರದ ಲಾಭದ ದೃಷ್ಟಿಯಿಂದ ಬಸ್ಸ್ ಸರ್ವಿಸುಗಳನ್ನು ನಡಿಸುತ್ತಿರುವವರು ಸ್ಪರ್ಧೆಯನ್ನು ಸಹಿಸಲಾರದೆ ಒಂದೊಂದು ಲೈನಿನಲ್ಲಿ ತಮ್ಮದಲ್ಲದೆ ಬೇರೆ ಸರ್ವಿಸುಗಳು ನಡಿಯದಂತೆ ಮಾಡಲು ಪ್ರಯತ್ನಿಸುವುದು ಜನರಿಗೆ ತಿಳಿಯದ ವಿಷಯವಲ್ಲ. ಒಂದು ಲೈನಿನಲ್ಲಿ ಬಲಾಢ್ಯ ಕಂಪೆನಿಯೊಂದು ಪೈಪೋಟಿ ನಡಿಸುತ್ತಿ ತನ್ನ ಚಾರ್ಜನ್ನು ಅತಿ ಕಡಿಮೆ ದರಕ್ಕೆ ಇಳಿಸಿ, ಅಥವಾ ಕೆಲಕಾಲ ಚಾರ್ಜಿಲ್ಲದೇ ನಡಿಸಿ ಚಿಕ್ಕ ಚಿಕ್ಕ ಸರ್ವಿಸುಗಳನ್ನು ಮುಳುಗೆಗೊತ್ತಲು ಈಗ ಅವಕಾಶವಿದೆ; ಹೀಗೆಯೇ ನಡಿಸಲ್ಪಡುತ್ತಲೂ ಇದೆ. ಹೀಗೆ ಚಿಕ್ಕ ಸರ್ವಿಸುಗಳನ್ನು ಹೊಂದೂಡದ ಮೇಲೆ ದೊಡ್ಡ ಸರ್ವಿಸಿನವರು ತಮ್ಮ ಮನಸ್ಸೋ ಇಚ್ಛೆ ಸ್ಪರ್ಧೆ ಇಲ್ಲದೆ ನಿಂಬು ಮಾಡಿದ ಹೆಚ್ಚಿನ ದರದಷ್ಟು ಚಾರ್ಜು ಮಾಡುತ್ತಾ ಪ್ರಯಾಣಸ್ಥರ ಸೌಕರ್ಯಗಳಿಗೆ ಗಮನಿಸದೆ ಸರ್ವಿಸು ನಡಿಸಲು ಅವರಿಗೆ ಎಡೆಯೊದೆಯುತ್ತದೆ. ಇದರಿಂದ ಪ್ರಯಾಣಿಕರಿಗೆ ತುಂಬಾ ನಷ್ಟವೂ, ತೊಂದರೆಯೂ ಉಂಟಾಗುವುದಲ್ಲದೆ ಸರ್ಕಾರದ ಈ ಬಾಬಿನ ಉತ್ಪತ್ತಿಯೂ ಕಡಿಮೆಯಾಗುತ್ತದೆ. ದೊಡ್ಡ ಸರ್ವಿಸಿನೊಂದಿಗೆ ಚಿಕ್ಕ ಸರ್ವಿಸಿಗೆ ಪೈಪೋಟಿ ನಡಿಸಲು ಸಾಧ್ಯವಿಲ್ಲದ್ದರಿಂದ ಒಂದು ಲೈನಿನಲ್ಲಿ ಬಲಾಢ್ಯ ಸರ್ವಿಸಿನ ಬಸ್ಸುಗಳು ಮಾತ್ರ ಓಡ್ಯಾಡುವ ಕಾರಣ ಬಸ್ಸುಗಳ ಸಂಖ್ಯೆಯು ಕಡಿಮೆಯಾಗಿ ಸರ್ಕಾರಕ್ಕೆ ದೊರೆಯುವ ಮೋಟಾರು ತೆರಿಗೆ ಇಳಿದು ಹೋಗುವುದು. ಆದುದರಿಂದ ಒಂದು ಲೈನಿನಲ್ಲಿ ಒಂದಕ್ಕಿಂತ ಹೆಚ್ಚು ಬೇರೆ ಬೇರೆ ಸರ್ವಿಸುಗಳು ಇರುವಂತೆ ಮಾಡಿ ಸ್ಪರ್ಧೆಗೆ ಎಡೆ ಕಲ್ಪಿಸುವುದು ಅತ್ಯಗತ್ಯವಾಗಿದೆ.

ಈಗಿನ ಸ್ಥಿತಿಯಲ್ಲಿ ಚಿಕ್ಕ ಸರ್ವಿಸುಗಳು ಬಲಾಢ್ಯ ಸರ್ವಿಸುಗಳೊಂದಿಗೆ ಪೈಪೋಟಿ ನಡೆಸಲಾರದೆ ಅಂಥಾ ದೊಡ್ಡ ಸರ್ವಿಸುಗಳ ಶರತ್ತಿನಂತೆ ಉತ್ಪತ್ತಿಯನ್ನು ವಿಭಾಗಿಸಿಕೊಳ್ಳಲು ಅವುಗಳೊಂದಿಗೆ ಜೊತೆ ಸೇರುತ್ತಿರುವುದು ಕಂಡು ಬರುತ್ತಿದೆ. ಒಂದು ಲೈನಿನಲ್ಲಿ ಓಡ್ಯಾಡುವ ಬೇರೆ ಬೇರೆ ಬಸ್ಸ್ ಸರ್ವಿಸುಗಳೆಲ್ಲಾ ಹೀಗೆ ಜೊತೆ ಸೇರಿದ್ದರೆ ಅದು ಒಂದೇ ಸರ್ವಿಸಿನವರ ಕೆಲವು ಬಸ್ಸುಗಳು ನಡೆಸಲ್ಪಟ್ಟಂತಾಗುತ್ತದೆ. ಪೈಪೋಟಿ ಇಲ್ಲದ್ದರಿಂದ ಅವರಿಗೆ ಮನಸು ಬಂದಂತೆ, ನಿಯಮ ಮಾಡಿದ ಹೆಚ್ಚಿನ ದರವನ್ನು ವಸೂಲಿ ಮಾಡಬಹುದು. ಪ್ರಯಾಣಿಕರು ಯಾವದ್ದಾದರೊಂದು ಬಸ್ಸಿನಲ್ಲಿ ಹೋಗಲೇ ಬೇಕಾಗಿರುವುದರಿಂದಲೂ, ಅವರು ಯಾವ ಬಸ್ಸಿನಲ್ಲಿ ಹೋದರೂ ಕೂಡ ಅವರ ಚಾರ್ಜಿನ ಪಾಲು ಎಲ್ಲಾ ಬಸ್ಸುಗಳಿಗೂ ದೊರೆಯುವುದರಿಂದಲೂ ಹಾಗೆ ಜೊತೆಗೂಡಿದ ಯಾವ ಬಸ್ಸಿನವರೂ ಪ್ರಯಾಣಿಕರ ಸವುಕರ್ಯಗಳಿಗೆ ನಿಗವಿಟ್ಟು ಅವರ ಪ್ರೀತಿಯನ್ನು ಸಂಪಾದಿಸುವ ಅಗತ್ಯವಿಲ್ಲುವುದಿಲ್ಲ. ಈಗಿನ ಸರ್ವಿಸುಗಳ ಉದ್ದೇಶವು ಲಾಭ ಸಂಪಾದನೆಯೊದುದರಿಂದ ತನುಗೆ ಹೆಚ್ಚಿನ ಉತ್ಪತ್ತಿಯು ಸಿಕ್ಕುವಂತಿದ್ದರೆ ಮಾತ್ರ ಅವು ಜನಪ್ರಿಯವಾಗಲು ಯತ್ನಿಸುವವು. ಆದುದರಿಂದ ಪ್ರಯಾಣಿಕರ ಹಿತದ ದೃಷ್ಟಿಯಿಂದ ಆಲೋಚಿಸುವದಾದರೆ ಪ್ರತಿಯೊಂದು ಲೈನಿನಲ್ಲಿಯೂ ಸ್ಪರ್ಧೆಗೆ ಅವಕಾಶವಿಂಬೇಕು ಹೀಗೆ ಪೈಪೋಟಿಗೆ ಅವಕಾಶ ಕಲ್ಪಿಸಬೇಕಾದರೆ ದೊಡ್ಡ ಸರ್ವಿಸುಗಳಿಗೆ ಚಿಕ್ಕ ಸರ್ವಿಸುಗಳು ಒಲಿಪೀಳದರತಕ್ಕಾಗಬೇಕು. ಇದನ್ನು ಸಾಧಿಸಲು ಸರ್ಕಾರದವರು ಬಸ್ಸ್ ಚಾರ್ಜಿನ ಅತೀ ಕಮ್ಮಿ ದರವನ್ನೂ ನಿಯಮಿಸಬೇಕು.

ಜನ ಸಾಮಾನ್ಯರ ಹಿತಕ್ಕಾಗಿ ಬಸ್ಸ್ ಚಾರ್ಜಿನ ಅತೀ ಹೆಚ್ಚಿನ ದರವನ್ನು ನಿಶ್ಚಯಿಸಿರುವ ಅಧಿಕಾರಿಗಳಿಗೆ ಅತೀ ಕಡಮೆ ದರವನ್ನು ನಿರ್ಣಯಿಸುವ ಹಕ್ಕು ಇದೆ ಎಂಬುದರಲ್ಲಿ ಸಂಶಯವಿಲ್ಲ. ಈ ಕಾರಣದಿಂದಲೇ ಹೊರ ಪ್ರಾಂತ್ಯಗಳ ಕೆಲವು ಕಡೆಗಳಲ್ಲಿ ರೈಲ್ವೆಗಳೊಂದಿಗೆ ಸ್ಪರ್ಧೆ ನಡೆಸುತ್ತಿರುವ ಬಸ್ಸ್ ಸರ್ವಿಸುಗಳು ರೈಲ್ವೆ ಚಾರ್ಜಿಗಿಂತ ಕಡೆಮೆ ಮಾಡಕೂಡದೆಂದು ಸರ್ಕಾರದವರು ನಿಬಂಧನೆ ಮಾಡಿರುವರು; ಕಲ್ಕತ್ತಾ ಮುಂಬಾಯಿ ಮುಂತಾದ ದೊಡ್ಡ ಪಟ್ಟಣಗಳಲ್ಲಿ ಬಾಡಿಗೆ ಕಾರು, ಸವಾರಿ ಗಾಡಿ ಮೊದಲಾದವುಗಳ ಚಾರ್ಜಿನ ದರವನ್ನು ಮುನ್ಸಿಪಾಲಿಟಿಯವರು ನಿರ್ಣಯಿಸಿರುವರು. ಹಾಗೆಯೇ ಕೊಡಗಿನಲ್ಲಿ ಬಸ್ಸ್ ಚಾರ್ಜಿನ ದರವನ್ನು ನಿರ್ಣಯಿಸುವುದು ಅಗತ್ಯವೂ, ನ್ಯಾಯವೂ ಆಗಿದೆ. ಈ ದೇಶದ ಸ್ಥಿತಿಗತಿಗಳನ್ನು ಗಣನೆಗೆ ತೆಗೆದುಕೊಂಡು ಇಲ್ಲಿ 20 ಮೈಲುಗಳೊಳಗಿನ ದೂರಕ್ಕೆ ಮೈಲಿಗೆ 6 ಕಾಸಿಗಿಂತ ಕಡೆಮೆಯಾಗದೆಯೂ, 20 ಮೈಲುಗಳಿಗಿಂತ ಹೆಚ್ಚಿನ ಪ್ರಯಾಣಕ್ಕೆ ಮೈಲಿಗೆ 4 ಕಾಸಿಗಿಂತ ಕಡೆಮೆಯಾಗದೆಯೂ ಮತ್ತು ಯಾವ ಸಂದರ್ಭದಲ್ಲೂ ಮೈಲಿಗೆ ಒಂದಾಣೆಗಿಂತ ಹೆಚ್ಚಾಗದೆಯೂ ಚಾರ್ಜು ಮಾಡತಕ್ಕದ್ದು ಎಂದು ನಿಬಂಧನೆ ಮಾಡುವುದು ಯೋಗ್ಯವಾಗಿದೆ. ಹೀಗೆ ಮಾಡದೆ ಈಗಿರುವಂತೆಯೇ ಬಿಟ್ಟರೆ ಜನರಿಗೂ ಹಾಗೆಯೇ ಸರ್ಕಾರದವರಿಗೂ ಕಷ್ಟ ನಷ್ಟಗಳು ಸಂಭವಿಸದೆ ಇರದು ಆದಕಾರಣ ಅಧಿಕಾರಿಗಳು ಈ ವಿಷಯಕ್ಕೆ ಕೂಡಲೇ ತಕ್ಕ ಗಮನ ಕೊಡುವರಾಗಿ ಹಾರೈಸುತ್ತೇವೆ.

ಕಾಂಗ್ರೆಸಿಗೆ ಸಹಾಯವನ್ನೀಡಿ.

ಸ. ವ. ಪಟೇಲರ ಉಜ್ಜ್ವಲ ಭಾಷಣ.

ಕಳೆದ ವಾರದಲ್ಲಿ ಡೇರಾಡುನ್‌ನಲ್ಲಿ ಒಂದು ಸಾರ್ವಜನಿಕ ಸಭೆಯಲ್ಲಿ ಭಾಷಣವನ್ನೀಯುತ್ತಾ ಸರದಾರ ವಲ್ಲಭಾಯಿ ಪಟೇಲರು ಈ ಪ್ರಕಾರ ಹೇಳಿದರು—"ಭಾರತದ ದಿವ್ಯ ಧ್ಯೇಯವಾದ ಸ್ವರಾಜ್ಯವು ದೊರೆಯುವ ವರೆಗೆ ಭಾರತೀಯರು ಎಸೆಗುಂದದೆ ಧೈರ್ಯವಾಗಿ ತಮ್ಮ ಸ್ವತಂತ್ರ ಹೋರಾಟವನ್ನು ಮುಂದೊತ್ತುವರು. ಆ ಒಗ್ಗ್ಯ ಎಡೆಬಿಡದೆ ಚಳವಳವನ್ನು ನಡೆಸುವ ಕಾಂಗ್ರೆಸ್ ಸಂಸ್ಥೆಯು ಬಡ ಜನರದ್ದಾಗಿದೆಯಲ್ಲದೆ ಭಂಡವಲಗಾರರದ್ದಲ್ಲ. ಕಾಂಗ್ರೆಸಿಗೆ ಧನದ ಸಹಾಯವಲ್ಲ ಬೇಕಾಗಿರುವದು; ಬಡ ಜನರ ನಿಷ್ಕಲಂಕಿತ ಸಹಾನುಭೂತಿಯೇ ಬೇಕಾಗಿರುವದು. ಆದ್ದರಿಂದ ಪ್ರತಿಯೊಬ್ಬ ಕಾಂಗ್ರೆಸ್ ಕೆಲಸಗಾರನು ಅಂಥ ದಿವ್ಯ ಸಹಾನುಭೂತಿಯ ವಾತಾವರಣವನ್ನುಂಟುಮಾಡಲು ಪ್ರಯತ್ನಿಸಬೇಕು. ಬಡ ಜನರು ಕಾಂಗ್ರೆಸ್ಸಿನಲ್ಲಿ ಇಡುವ ದೃಢ ನಂಬಿಕೆಯೇ ಕಾಂಗ್ರೆಸಿನ ಧ್ಯೇಯಸಾಧನೆಗೆ ಅವಶ್ಯಕವಾದ ಬೆಂಬಲ. ನಮ್ಮ ಭಾರತದಲ್ಲಿರುವ 35 ಕೋಟಿ ಜನರನ್ನು ದೂಂದಲ್ಲಿರುವ ದ್ವೀಪಗಳ ನಿವಾಸಿಗಳು ಆರ್ಡಿನೇನ್ಸುಗಳ ಮತ್ತು ಪೋಲೀಸು ಬಲಗಳ ಮೂಲಕ ಆಳುವರು. ಈ ಕಾರಣದಿಂದ ಅನೇಕರಿಗೆ ಈ ಆಳ್ವಿಕೆಯಿಂದ ಮುಕ್ತಿ ಹೊಂದುವ ಆಶೆಯೇ ಇಲ್ಲದಾಗಿದೆ. ಆದರೆ ಕಾಂಗ್ರೆಸು ಕೆಲಸಗಾರರು ಈ ಪ್ರಕಾರ ನಿರಾಶಿತರಾಗಿರುವದಿಲ್ಲ. ಅಲ್ಲದೆ ಅವರು ಹಾಗೆ ನಿರಾಶಿತರಾಗಲೂ ಬಾರದು. ಅವರ ಪವಿತ್ರ ನಾಡಿನಲ್ಲಿ ಕರ್ಮಯೋಗಿ ಜ್ಯೋತಿಗಳಾದ ಮಹಾತ್ಮರಂಥವರೂ, ತ್ಯಾಗ ಮೂರ್ತಿಗಳಾದ ಜವಾಹರ್‌ಲಾಲರಂಥವರೂ ಅವತರಿಸಿರುವದರಿಂದ ನಿರಾಶೆಗೆ ಕಾರಣವಿರುವದಿಲ್ಲ.

ಕಳೆದ ಸತ್ಯಾಗ್ರಹದಲ್ಲಿ ಸಹಸ್ರಾರು ಮಂದಿ ಸ್ತ್ರೀ ಪುರುಷರು ಕಾರಾಗೃಹವಾಸವನ್ನು ಕೈಕೊಂಡರು ಅವರ ಅಪೇಕ್ಷವಾದ ಆತ್ಮಾರ್ಪಣೆಯಿಂದ ಸ್ವರಾಜ್ಯ ದೊರೆಯಲಿಲ್ಲವೆಂಬ ನಿರಾಶೆಯು ಅವರಲ್ಲಿ ಉಂಟಾಗಿರಬಹುದು. ಆದರೆ ಅವರು ಅವರ ಕಾರ್ಯವನ್ನು ಮೊದಲಿನಂತೆಯೇ ಮುಂದರಿಸಬೇಕು. ಹಾಗೆ ಮಾಡಿದ್ದಲ್ಲಿ ಜಯವು ಖಂಡಿತ ಲಭಿಸದಿರದು. ಸರ್ಕಾರದವರಲ್ಲಿ ಪಶು ಬಲವು ಇದೆ. ನಮ್ಮಲ್ಲಿ ಮಹಾತ್ಮರಿಂದ ಪ್ರೇರಿತವಾದ ಆತ್ಮಬಲ ಮಾತ್ರವಿದೆ. ಆತ್ಮ ಬಲವು ದೈವಸಂಭೂತವಾದದ್ದರಿಂದ ಅದಕ್ಕೆ ಸೋಲಿಲ್ಲ. ಸತ್ಯಾಗ್ರಹವು ತತ್ಕಾಲಕ್ಕೆ ನಿಲ್ಲಿಸಲ್ಪಟ್ಟಿರುವದಾದರೂ ಅದು ಪುನಹ ಪ್ರಾರಂಭವಾಗುವುದು. ಅದು ಯಾವಾಗ ಮತ್ತು ಹೇಗೆ ಎಂಬುವುದು ಈಗಲೇ ಹೇಳಬರುವದಿಲ್ಲ. ಮಹಾತ್ಮರು ಕಳೆದ ದಂಡಯಾತ್ರೆಯನ್ನು ಕೈಕೊಂಡಾಗ ಚಳವಳವು ಹ್ಯಾಗೆ ಪ್ರಬಲಿಸುವವದೆಂಬದರ ಕಲ್ಪನೆಯು ಅವರಿಗಿರಲಿಲ್ಲ. ಅದು ಎಷ್ಟರ ಮಟ್ಟಿಗೆ ಜಯಪ್ರದವಾಯಿತೆಂಬದು ನಮಗೆ ತಿಳಿದಿದೆ. ಆದರೆ ಮುಂದಿನ ಸತ್ಯಾಗ್ರಹವು 1930—32ಕ್ಕಿಂತ ಪ್ರಬಲವಾದದ್ದಾಗುವದು.

ಸರ್ಕಾರದವರ ಕಾರ್ಯಕರ್ತರುಗಳು ಪ್ರತಿಯೊಂದು ಹಳ್ಳಿಯಲ್ಲೂ ಹೇಗಿರಿಸಲ್ಪಟ್ಟಿರುವರೋ ಹಾಗೆಯೇ ಕಾಂಗ್ರೆಸಿನ ಕಾರ್ಯಕರ್ತರೂ ಕೂಡ ಪ್ರತಿ ಹಳ್ಳಿಗಳಲ್ಲೂ ಇರತಕ್ಕದ್ದು. ನಾವು ಕವುನ್ಸಿಲುಗಳಲ್ಲೂ, ಲೋಕಲ್ ಬೋರ್ಡ್‌ಗಳಲ್ಲೂ ಮಾತ್ರ ನಮ್ಮಲ್ಲಿನ ಪ್ರತಿನಿಧಿಗಳನ್ನಿರಿಸಿ ಅವರಲ್ಲಿ ಭರವಸೆಯನ್ನಿಡುವದು ನಮ್ಮ ಕೊರತೆಯಾಗಿದೆ. ನಮ್ಮ ಪ್ರತಿನಿಧಿಗಳು ಪ್ರತಿಯೊಂದಡೆಯಲ್ಲೂ ಇರಬೇಕು. ಹಳ್ಳಿಗಳಲ್ಲೂ ಹೆಚ್ಚಿನ ಸಂಖ್ಯೆಯಲ್ಲಿರಬೇಕು.

(ಸರ್ದಾರ್ ವಲ್ಲಭಭಾಯಿ ಪಟೇಲ್.)

ಕಾಂಗ್ರೆಸ್ಸಿನ ಬಲವು ದಿನೇ ದಿನೇ ವರ್ಧಿಸುತ್ತಲಿರುವದರಿಂದ ನನಗೆ ನಮ್ಮ ಭವಿಷ್ಯವನ್ನು ಕುರಿತು ಎಳ್ಳಷ್ಟೂ ನಿರಾಶೆಯಿಲ್ಲ. ಮಹಾತ್ಮರು ಕಾಂಗ್ರೆಸ್ಸನ್ನು ತ್ಯಜಿಸಿರುವರೆಂಬ ನಿರಾಶೆಯೂ ನನಗಿಲ್ಲ. ಅವರು ವಸಂತ ಕಾಲದ ಸೂರ್ಯನಂತೆ ಮತ್ತೊಮ್ಮೆ ಕಾಂಗ್ರೆಸಿನಲ್ಲಿ ಉದಯಿಸುವಾಗ್ಗೆ ಕಾಂಗ್ರೆಸ್ಸು ನವತೇಜೋಭವಿತವಾಗುವದರಲ್ಲಿ ಸಂಶಯವಿಲ್ಲ.

ನಮ್ಮಲ್ಲಿ ಸಂಘಟನೆಯೊಗದೇಕಾಗಿದೆ. ನಮ್ಮ ಕಾರ್ಯ ಸಾಫಲ್ಯಕ್ಕೆ, ನಮ್ಮ ಧ್ಯೇಯಸಾಧನೆಗೆ ನಾವು ನಮ್ಮೊಳಗಿನ ಸಣ್ಣ ಪುಟ್ಟ ವಿಚಾರಂಗಳನ್ನು ಬದಿಗಿಟ್ಟು ಐಕ್ಯಮತ್ಯದಿಂದ ವರ್ತಿಸಬೇಕು. ಈ ಸಂಣ ಪುಟ್ಟ ವಿಚಾರಂಗಳೂ, ಮೈಷಮ್ಯಗಳೂ ಮತ್ತು ವೈಯಕ್ತಿಕ ತೊಡರುಗಳೂ ಪ್ರತಿಯೊಂದು ಸಮೂಜದಲ್ಲಿರುವವೇ ಆದ್ದರಿಂದ ನಮ್ಮಲ್ಲಿರುವದೂ ಸಹಜವಾಗಿದೆ. ಆದರೆ ಅತೀ ಮುಖ್ಯ ವಿಚಾರವಾದ ಸ್ವಾತಂತ್ರ್ಯ ಹೋರಾಟದ ಕಾರ್ಯದಲ್ಲಿ ಇವಕ್ಕೆ ಪ್ರಧಾನತೆಯನ್ನು ಕೊಡದೆ, ಅವುಗಳನ್ನು ಬದಿಗಿಡಬೇಕು. ಬೇರೆ ರಾಷ್ಟ್ರದವರು ತಮ್ಮ ಸ್ವಾತಂತ್ರ್ಯತೆಯನ್ನು ಹೊಂದಬೇಕಾದರೆ ಈ ಪ್ರಕಾರದ ಸಣ್ಣ ಪುಟ್ಟ ವಿಚಾರಗಳನ್ನು ಒದಿಗೊತ್ತಿ ದೇಶದ ಸೇವೆಯಲ್ಲಿ ನಿರತರಾದುದರಿಂದಲೇ ಜಯಶೀಲರಾದರು ಭಾರತದ ಕಲ್ಯಾಣವು ಭಾರತದ ಹಳ್ಳಿಗಳನ್ನವಲಂಬಿಸಿರುತ್ತದೆ. ಆದ್ದರಿಂದ ಹಳ್ಳಿಗರಲ್ಲಿ ಪ್ರಚಾರ ಮತ್ತು ಸಂಘಟನಾ ಕಾರ್ಯಗಳು ಸಾಗಬೇಕು ನನಗೆ ಕೌನ್ಸಿಲುಗಳನ್ನು ಹೊಕ್ಕುವದರಲ್ಲಿ ನಂಬಿಕೆಯಿಲ್ಲದಿದ್ದರೂ ಅದರಿಂದ ಪ್ರಯೋಜನವೇ ಇಲ್ಲವೆಂದು ಹೇಳಲಾರೆನು. ಅಲ್ಲೂ ನಮ್ಮವರು ಸೇರಿ ಕೌನ್ಸಿಲುಗಳ ಧೋರಣೆಯನ್ನು ಬದಲಾಯಿಸಲಿ. ಎಲ್ಲೆಲ್ಲೂ ನಮ್ಮ ಕಾರ್ಯಕರ್ತರು ಇದ್ದು ಸ್ವತಂತ್ರ ಹೋರಾಟದ ಧ್ವಜವನ್ನು ಎತ್ತಿ ನಡೆಯಲಿ. ಆದ್ದರಿಂದ ಸಕಲರೂ ಯಾವ ಪಕ್ಷ ವಿಚಾರವನ್ನು ಇಡದೆ ಕಾಂಗ್ರೆಸಿನ ಸದಸ್ಯರುಗಳಾಗಿ ಖಾದಿ ಪ್ರೋತ್ಸಾಹಕರಾಗಿ ದೇಶದ ಮುಂದಿರುವ ದೃಢಸಂಕಲ್ಪ ಸಾಧನೆಗೆ ದುಡಿಯುವವರಾಗಿ.'

ಒಳದೇಶ.

ವೀರಾಜಪೇಟೆಯಿಂದ ಐದುಮೈಲು ಗಾತ್ರದ ಬೆಳ್ಳಚ್ಚಂಡ ಸುಬ್ಬಯ್ಯನವರು ಗುಂಡು ಹೊಡೆದುಕೊಂಡು ಈ ತಾ. 12 ರಲ್ಲಿ ಆತ್ಮಹತ್ಯೆ ಮಾಡಿಕೊಂಡರಾಗಿ ತಿಳಿದು ಬರುತ್ತದೆ.

ಈ ವಾರ ಕೊಡಗಿನ ಹಲವು ಕಡೆಗಳಿಗೆ ಒಳ್ಳೇ ಮಳೆ ಬಿದ್ದಿದೆ. ಇದರಿಂದ ಕಾಫಿ ತೋಟಗಳಿಗೆ ತುಂಬಾ ಪ್ರಯೋಜನವಾಗಿದೆ. ಈ ತಾರೀಕು 19 ರಲ್ಲಿ ಮಡಿಕೇರಿಯಲ್ಲಿ ಜೆನ್ನಾಗಿ ಮಳೆ ಹೊಡೆಯಿತು.

ಈ ವಾರ ವಿರಾಜಪೇಟೆಯಲ್ಲಿ ಒತ್ತ ಗಾತಿಗೆ ರೂ. 42 ಮತ್ತು ಮಡಿಕೇರಿಯಲ್ಲಿ ಕಾಫಿ ಖಾಡಿಗೆ ರೂ. 115ರಿಂದ 120ರ ವರೆಗೂ, ಯೂಲಕ್ಕಿ ಮಣಕ್ಕೆ ರೂ. 31 ಕ್ರಯವಿತ್ತೆಂದು ತಿಳಿಯಬರುತ್ತದೆ.

ಅಮ್ಮತ್ತಿ—ಪೊಳ್ಳೆಬೆಟ್ಟ ರಸ್ತೆ ಒಳಿ ಇದ್ದ ಮೆ. ಕೋದಂಡ ಚಿಣಪ್ಪನವರ ಮನೆಗೆ ಅಕಸ್ಮಾತ್ತು ಬೆಂಕಿ ಬಿದ್ದು ಮನೆಯೂ, ಅದರೊಳಗಿದ್ದ ಸ್ವಲ್ಪ ಭತ್ತವೂ ಬೆಂದು ಹೋಗಿದೆಯೆಂದು ತಿಳಿಯಬರುತ್ತದೆ.

ಕೊಡಗು ಜೇನು ಮತ್ತು ಮೇಣ ತಯಾರಿಸುವವರ ಸಂಘದ ಆಫೀಸು ವೀರಾಜಪೇಟೆಯಲ್ಲಿ ಈ ತಾ. 29ರಲ್ಲಿ ತೆರೆಯಲ್ಪಡುವುದು. ಈ ಸಂಘದ ಹಸ್ತ ಪತ್ರಿಕೆಯು ಈ ಸಂಬಿಕೆಯ ಪುರವಣಿಯಾಗಿ ಕಳುಹಿಸಲ್ಪಟ್ಟಿದೆ.

ಮಡಿಕೇರಿ ಮುನ್ಸೀಫರಾಗಿ ನೇಮಿಸಲ್ಪಟ್ಟ ಮೆ ಪುಚ್ಚಿ ಮಾಡ ನಾಣಯ್ಯನವರು ತಮ್ಮ ಕೌನ್ಸಿಲು ಮೆಂಬರುತನಕ್ಕೆ ಕೊಟ್ಟ ರಾಜಿನಾಮೆಯನ್ನು ಚೀಫ್ ಕಮಿಷನರವರು ಅಂಗೀಕರಿಸಿರುವರಾಗಿ ವರ್ತಮಾನ.

ಕೊಡಗು ಡಿಸ್ಟ್ರಿಕ್ಟ್ ಬೋರ್ಡಿನ ಬಡ್ಜೆಟ್ ಮೀಟಿಂಗು ಈ ತಾ. 11ರಲ್ಲಿ ಕೌನ್ಸಿಲ್ ಹಾಲ್‌ನಲ್ಲಿ ನಡೆಯಿತು. ರಾ. ಸಾ. ಪಿ. ಎ. ಚಂಗಪ್ಪನವರು ಅಧ್ಯಕ್ಷರಾಗಿದ್ದರು. ಇದರ ವಿವರವು ಇನ್ನೊಂದು ಕಡೆ ಕೊಡಲಾಗಿದೆ.

ಕೊಡಗು ಸಹಕಾರಿ ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ಈ ತಾ. 28ನೇ ಶನಿವಾರ ಬೆಳಿಗ್ಗೆ 11 ಗಂಟೆಗೂ, ಸುಪರ್‌ವಿಜನ್ ಬೋರ್ಡಿನ ಡೈರೆಕ್ಟರುಗಳ ಮೀಟಿಂಗು ಮಧ್ಯಾಹ್ನದ ಮೇಲೆ 3 ಗಂಟೆಗೂ ಬ್ಯಾಂಕಿನ ಆಫೀಸಿನಲ್ಲಿ ನಡೆಯುವುದು.

ಸೋಮವಾರಪೇಟೆನಾಡು ಸಹಕಾರಿ ಯೂನಿಯನ್ನಿನ ಜನರಲ್ ಮೀಟಿಂಗು ಸಹಕಾರಿ ಸೆಂಟ್ರಲ್ ಬ್ಯಾಂಕ್ ಪ್ರೆಸಿಡೆಂಟರ ಅಧ್ಯಕ್ಷತೆಯಲ್ಲಿಯೂ, ಸಹಕಾರಿ ಪರಿಷತ್ತು ರಿಜಿಸ್ಟ್ರಾರವರ ಅಧ್ಯಕ್ಷತೆಯಲ್ಲಿಯೂ ಈ ತಾ. 19ರಲ್ಲಿ ಸೋಮವಾರಪೇಟೆಯಲ್ಲಿ ನಡೆದವು.

ಬೇರೆ ಕಡೆ ವರ್ಗಾಯಿಸಲ್ಪಟ್ಟಿರುವ ಕಮಿಷನರಾದ ಮೆ. ಬಾಸ್‌ಮೆಂಟರವರಿಗೆ ವೀರಾಜಪೇಟೆಯ ಹಿತಚಿಂತಕರು ಈ ತಾ. 20ರಲ್ಲಿಯೂ, ಮಡಿಕೇರಿಯಲ್ಲಿ ಫ್ರೋಟ್ಸ್ ಕ್ಲಬ್ಬಿನವರು ತಾ. 22ರಲ್ಲಿಯೂ, ಹಿತಚಿಂತಕರು ತಾ. 23ರಲ್ಲಿಯೂ ಟೀ ಪಾರ್ಟಿ ಕೊಡುವರಾಗಿ ತಿಳಿಯುತ್ತೇವೆ.

ಲ್ಯಾಂಡ್ ರಿಕಾರ್ಡ್ ಆಫೀಸಿನ ರಿಟಯರ್ಡ್ ಹೆಡ್ ಕ್ಲರ್ಕರಾದ ಮೆ. ಪಟ್ಟಮಾಡ ಮುತ್ತಪ್ಪನವರ ಪುತ್ರ, ದೇವಯ್ಯನವರು ಅವರ ಮಡಿಕೇರಿ ಮನೆಯಲ್ಲಿ ಈ ತಾ 13ರ ರಾತ್ರಿ ಆಫೀಮು ಸೇವಿಸಿ ಆತ್ಮಹತ್ಯೆ ಮಾಡಿಕೊಂಡರೆಂದು ತಿಳಿಯುತ್ತೇವೆ.

ಫ್ರೇಜರ್‌ಪೇಟೆ ಹೊಬಳಿಯ ತೊರೆನೂರು ಮತ್ತು ಗದ್ದೆಹೊಸಳ್ಳಿ ಗ್ರಾಮಗಳಿಗಾಗಿ ಹತ್ತು ಮೆಂಬರುಗಳ ಒಂದು ಪಂಚಾಯಿತಿಯನ್ನು ಬರುವ ಏಪ್ರಿಲ್ ತಾರೀಕು 1ರಿಂದ ಸ್ಥಾಪಿಸುವಂತೆಯೂ, ಅದರಲ್ಲಿ ತೊರೆನೂರಿಗೆ 9 ಮೆಂಬರುಗಳು ಮತ್ತು ಗದ್ದೆಹೊಸಳ್ಳಿಗೆ ಒಬ್ಬ ಮೆಂಬರನು ಇರುವಂತೆಯೂ ಚೀಫ್ ಕಮಿಷನರು ಪ್ರಕಟಿಸಿರುವರು.

ಈ ತಾ. 14ರಲ್ಲಿ ಅಮ್ಮತ್ತಿನಾಡು ಕಾರ್ಮಾಡು ಗ್ರಾಮದ ಮೆ. ಉದ್ದಪಂಡ ಕಾರ್ಯಪ್ಪನವರು ತನ್ನ ಕೊಟ್ಟಿಗೆಗೆ ಅಕಸ್ಮಾತ್ತು ಬೆಂಕಿ ಹತ್ತಿದನ್ನು ನಂದಿಸಲಿಕ್ಕಾಗಿ ಮಾಡಿನ ಮೇಲೆ ಹತ್ತಿ ಪ್ರಯತ್ನಿಸಿದ್ದಾಗ್ಯೆ ಬೆಂಕಿಯಿಂದ ಅವರಿಸಲ್ಪಟ್ಟು ಕೆಳಗೆ ಬಿದ್ದು ದೇಹ ಪೂರಾ ಸುಟ್ಟು ಹೋಗಿ ಆ ದಿನ ಸಾಯಂಕಾಲ ಮೃತರಾದರೆಂದು ತಿಳಿಯಲು ವಿಷಾದಿಸುತ್ತೇವೆ.

ಹಿಂದೂದೇಶ.

ಬರ್ಮಾ ಕೌನ್ಸಿಲಿನವರು ಎರಡೆರಡು ಸಲ ಮಂಜೂರು ಮಾಡಲು ನಿರಾಕರಿಸಿರುವ ಕ್ರಿಮಿನಲ್ ಲೋ ಎಮೆಂಡ್‌ಮೆಂಟ್ ಆಕ್ಟನ್ನು ಗವರ್ನರವರು ಸರ್ಟಿಫೈ ಮಾಡಿರುವರು.

ತಾ 12ನೇ ಗುರುವಾರ ಬೊಂಬಾಯಿಯಲ್ಲಿ ವಾಯು ವಿನ ಕಾವು 100-6 ಡಿಗ್ರಿ ಇದ್ದಿತೆಂದೂ, ಸುಮಾರು ಒಂದು ಶತಮಾನದಿಂದೀಚೆಗೆ ಅಲ್ಲಿ ಯಾವ ವರ್ಷವೂ ಈ ವರ್ಷದಷ್ಟು ಸೆಕೆಯನ್ನು ಜನರು ಅನುಭವಿಸಲಿಲ್ಲವೆಂದೂ ಪ್ರಕಟವಾಗಿದೆ.

1921ನೇ ಇಸವಿಯಿಂದೀಚೆಗೆ ದಕ್ಷಿಣ ಇಂಡಿಯಾದಲ್ಲಿ 50,000 ಜನರು ಹಿಂದೀ ಭಾಷಾಭ್ಯಾಸ ಮಾಡಲು ಪ್ರಾರಂಭಿಸಿದ್ದಾರೆಂದೂ, ಅವರ ಪೈಕಿ 12,893 ಜನರು ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯವರು ನಡೆಸುತ್ತಿರುವ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುತ್ತಾರೆಂದೂ ತಿಳಿಯುವುದು.

ಶ್ರೀ ಸುಭಾಸ ಚಂದ್ರಬೋಸರು ಶ್ರೀಮತಿ ಕಮಲ ನೆಹರುಗಳ ಅಂತಿಮ ಕಾಲದಲ್ಲಿ ಲೋಸೇನಿನಲ್ಲಿ ಅವರೊಂದಿಗಿದ್ದರು. ಈಗ ಆಸ್ಟ್ರಿಯದ ಆರೋಗ್ಯ ವಸತಿಯೊಂದಕ್ಕೆ ಹೋಗಿರುವರು. ಶ್ರೀ ಬೋಸರು ಏಪ್ರಿಲ್ ತಾ 10 ಕ್ಕೆ ಬೊಂಬಾಯಿಗೆ ಮುಟ್ಟಲಿರುವರೆಂದು ತಿಳಿದು ಬರುತ್ತದೆ.

ಜರ್ಮನಿಯ ಮೆ. ಸಿ. ಕ್ರೀತ್ ಎಂಬವರು ಮೈಸೂರು ಸೀಮೆಯ ಕಾಡುಗಳಲ್ಲಿ ಸರ್ಕಾರದ ಅಪ್ಪಣೆಯನ್ನು ಪಡೆದು ಆರು ಆನೆ ಮರಿಗಳು, ಮೂರು ಕಾಡುಕೋಣಗಳು, ಮೂರು ಹುಲಿ ಮರಿಗಳನ್ನು ಸುಪಾರದನೆ ಮಾಡಿ ಅವನ್ನು ವಿದೇಶಕ್ಕೆ ಸಾಗಿಸಿಕೊಂಡು ಹೋಗಿ ಅಲ್ಲಿಂದ ಹಡಗಿನಲ್ಲಿ ಅವನ್ನು ಜರ್ಮನಿಗೆ ರವಾನೆ ಮಾಡಿದರು.

ಕೌನ್ಸಿಲ್ ಆಫ್ ಸ್ಟೇಟ್ ಎಂಬ ಸಭೆಗೆ ಮಹಿಳೆಯರು ಚುನಾವಣೆ ಪಡೆದು ಮೆಂಬರಾಗಲು ಅಥವಾ ಸರ್ಕಾರದವರೇ ನೇಮಕ ಮಾಡಲು ಅವಕಾಶವಿಲ್ಲ. ಆ ಸಭೆಗೆ ಮೆಂಬರಾಗಲು ಈಗಿರುವ ಈ ನಿರ್ಬಂಧಗಳನ್ನು ತೆಗೆದುಹಾಕಬೇಕೆಂದು ಕಳೆದ ವಾರದ ಅಧಿವೇಶನದಲ್ಲಿ ಸರ್ ಕೆ ರಾಮುನ್ನಿ ಮೇನನ್‌ರವರು ಸೂಚಿಸಿದ ನಿರ್ಣಯವು ಸರ್ವಾನುಮತದಿಂದ ವಿಫಲವಾಯಿತು.

ಮೈಸೂರು ಸಂಸ್ಥಾನದಲ್ಲಿ 1934—35ನೇ ಸಾಲಿನಲ್ಲಿ 1,04 553 ಜನನಗಳಾದವು. ಇದು ಹಿಂದಿನ ಸಾಲಿಗಿಂತಲೂ 9,000 ಹೆಚ್ಚಾಗಿದೆ ಈ ಸಾಲಿನಲ್ಲಿ 33—34ನೇ ಸಾಲಿಗಿಂತ 29,345 ಮರಣಗಳು ಕಡಮೆಯಾಗಿದೆ. ಇದೇ ಸಾಲಿನಲ್ಲಿ ಸಿಡುಬು ಉಪದ್ರದಿಂದ 4,562, ಪ್ಲೇಗಿನಿಂದ 3,181, ಕಾಲರಾ ತಗಲಿ 318 ಈ ರೀತಿ ಮರಣಗಳಾದವು ಮೈಸೂರು ಸಂಸ್ಥಾನದ ಜನಸಂಖ್ಯೆ 65,57 312.

ಟ್ರೇಡ್ ಯೂನಿಯನ್ ಕಾಂಗ್ರೆಸಿನ ಪ್ರೆಸಿಡೆಂಟರಾದ ಶ್ರೀ ರೂಯಿಕರವರು ಕಳೆದ ಏಪ್ರಿಲ್‌ನಲ್ಲಿ ಒಂದು ರಾಜನೈತಿಕ ಭಾಷಣವನ್ನು ಮಾಡಿದರ ವೇಲೆ ಅವರಿಗೆ ಒಂದು ವರ್ಷ ಸಜೆಯು ವಿಧಿಸಲಾಗಿತ್ತು. ಅದು ಅಪೀಲಿನಲ್ಲಿದ್ದು ಮೊನ್ನೆ ಕಲ್ಕತ್ತಾ ಹೈಕೋರ್ಟಿನವರು ಮೊದಲಿನ ಶಿಕ್ಷೆಯನ್ನು ಖಾಯಂ ಮಾಡಿದರು. ಮಿಸ್. ಮಣಿಬೆನ್ ಕಾರಾರವರು, ಇವರ ಸ್ಥಾನದಲ್ಲಿ ಅಖಿಲಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸಿನ ಅಧ್ಯಕ್ಷೆಯಾಗಿ ಆರಿಸಲ್ಪಟ್ಟಿರುವರು.

ಕರಾಚಿಯ ಮುನ್ಸಿಪಲ್ ಸಭೆಯವರು ಹೊಸ ವೈಸರಾಯರು ಲಾರ್ಡ್ ಲಿನ್‌ಲಿತ್‌ಗೋರವರಿಗೆ ಏಪ್ರಿಲ್ ತಾ. 1ರಲ್ಲಿ ಸ್ವಾಗತ ಕೊಡುವುದಕ್ಕಾಗಿ 500 ರೂ. ಮಂಜೂರು ಮಾಡಿದರು. ಆ ಸಂದರ್ಭದಲ್ಲಿ ಮೆಂಬರುಗಳು ಧರಿಸಬೇಕೆಂದು ಸೂಚಿಸಲ್ಪಟ್ಟ ಉಡುಪಿನ ವಿಷಯವಾಗಿ ಕೆಲವು ಮೆಂಬರುಗಳು ಕಠಿಣವಾಗಿ ಚರ್ಚಿಸಿದರು. ಖರ್ಚುವೆಚ್ಚದ ವಿಷಯವಾಗಿ ಚರ್ಚೆ ಪ್ರಾರಂಭ ಮಾಡಿದಾಗ ಕಾಂಗ್ರೆಸ್ ಪಕ್ಷದ ಮೆಂಬರುಗಳೆಲ್ಲ ಸಭೆಯನ್ನು ತ್ಯಜಿಸಿ ಹೊರಟು ಹೋದರೆಂದು ಹೇಳಲಾಗಿದೆ.

ಕಲ್ಕತ್ತಾ ಪಟ್ಟಣದ ವೋಕಿಫೆಸ್ಟ್ ಎಂಬಾತನಿಗೆ 40 ಸಾರಿ ಬಂದೀಖಾನೆಯಾಗಿರುತ್ತದೆ. ಕಳೆದ ವಾರ ಅವನು ಏನೂ ಕೆಲಸವಿಲ್ಲದಿದ್ದಾಗ್ಯೂ ಯಾವುದೊ ಒಂದು ಬೀದಿಯಲ್ಲಿ ಸುಮ್ಮನೆ ಸುತ್ತಾಡುತ್ತಿದ್ದನೆಂದು ಪೊಲೀಸಿನವರು ದಸ್ತಗಿರಿ ಮಾಡಿ ಕೋರ್ಟಿಗೆ ಹಿಡಿದುಕೊಂಡು ಹೋದರು. ಆತನು ಜಡ್ಜಿಯರನ್ನು "ಮಹಾಸ್ವಾಮಿ, ನನ್ನ ಜೀವಮಾನವನ್ನೆಲ್ಲಾ ಬಂದೀಖಾನೆಯಲ್ಲೇ ಕಳೆದು ಬಿಟ್ಟಿರುತ್ತೇನೆ. ದಯವಿಟ್ಟು ಕ್ಷಮಿಸಬೇಕು" ಎಂದು ಪ್ರಾರ್ಥಿಸಲು ಜಡ್ಜಿಯವರು ಅವನಿಗೆ ಒಂದು ತಿಂಗಳ ಸಜಾ ಶಿಕ್ಷೆ ವಿಧಿಸಿದರೆಂದು ಹೇಳಲಾಗಿದೆ.

ಮಹಾತ್ಮ ಗಾಂಧಿಯವರ ದೇಹಸ್ಥಿತಿಯು ಈಗ ಸ್ವಲ್ಪ ಉತ್ತಮವಾಗಿದಾಗ್ಯೂ ಇದ್ದಕ್ಕಿದ್ದ ಹಾಗೆಯೇ ರಕ್ತ ಬಡಿತವು ಹೆಚ್ಚಾಗಿ ಕೂಡಲೇ ಸಮಾಧಾನವಾಗುತ್ತದೆಂದು ಹೇಳಲಾಗಿದೆ. ಡಾ. ಅನ್ಸಾರಿಯವರು ಅವರನ್ನು ಪರೀಕ್ಷಿಸಿ ಪೂರ್ಣ ವಿಶ್ರಾಂತಿ ತೆಗೆದುಕೊಳ್ಳಬೇಕೆಂದು ಹೇಳಿರುತ್ತಾರೆ. ಅದಕ್ಕಾಗಿ ಮಹಾತ್ಮ ಗಾಂಧಿಯವರು ಬೆಳಿಗ್ಗೆ 10 ಗಂಟೆಯಿಂದ ಸಾಯಂಕಾಲ 5 ಗಂಟೆಯ ವರೆಗೆ ಯಾರ ಜೊತೆಯೂ ಮಾತನಾಡದೆ ಮೌನದಿಂದಿರುತ್ತಾರೆ. ಪ್ರತಿ ದಿನವೂ ಸಾಯಂಕಾಲ ಸಂಚಾರ ಹೊರಡುತ್ತಾರೆ. ಶ್ರೀ. ವಲ್ಲಭಾಯಿ ಪಟೇಲರು ಮಹಾತ್ಮರ ಶುಶ್ರೂಷೆ ಮಾಡುತ್ತಾ ಯಾರೂ ಅವರೊಡನೆ ಹೆಚ್ಚಾಗಿ ಮಾತುಕತೆಯಾಡಿ ತೊಂದರೆ ಕೊಡದಂತೆ ನೋಡಿಕೊಳ್ಳುತ್ತಿದ್ದಾರೆ ಮಹಾತ್ಮ ಗಾಂಧಿಯವರು ಲಕ್ನೋ ಕಾಂಗ್ರೆಸ್ ಅಧಿವೇಶನದಲ್ಲಿ ಭಾಗ ವಹಿಸುವರೋ ಎಂಬದು ಇನ್ನೂ ಅನುಮಾನಾಸ್ಪದವಾಗಿದೆ.

ಪಂಡಿತ ಜವಾಹರ್‌ಲಾಲ್ ನೆಹರೂರವರು ಕಳೆದ ತಾ 11ನೇ ಬುಧವಾರ ಬೆಳಿಗ್ಗೆ ಅಲಹಾಬಾದಿನ ಬಳಿ ಇರುವ ಬಾವ್ಲಿ ಎಂಬ ವಿಮಾನಗಳ ನಿಲ್ದಾಣದಲ್ಲಿ ವಿಮಾನದಲ್ಲಿ ಬಂದಿಳಿದರು. ಅವರ ಬಂಧೂಗಳೂ, ಹಿತಮಿತ್ರರೂ ಅನೇಕರು ಆ ಸ್ಟೇಶನ್ನಿನಲ್ಲಿ ಅವರಿಗಾಗಿ ಕಾದಿದ್ದರು. ಪಂಡಿತರು ವಿಮಾನದಿಂದಿಳಿದೊಡನೆಯೇ ನಿಶ್ಶಬ್ದವು ಮೂಡಿ ಸಮೂಹವೆಲ್ಲವೂ ಶೋಕಗ್ರಸ್ತವಾಯಿತು. ಹೆಂಗಸರು ಬಿಕ್ಕಿ ಬಿಕ್ಕಿ ಅಳಲು ಪ್ರಾರಂಭಿಸಿದರು. ಒಬ್ಬರ ಬಾಯಲ್ಲೂ ಮಾತೇ ಹೊರಡದಂತಾಯಿತು. ಜನರೆಲ್ಲರೂ ಮೂಕರಂತೆ ತಲೆಬಾಗಿ ನಿಂತರು. ಈ ದೃಶ್ಯವನ್ನು ನೋಡಿದೊಡನೆಯೇ ಪಂಡಿತರೂ ವ್ಯಸನಾಕ್ರಾಂತರಾದರು. ಅದೇ ದಿನ ಸಾಯಂಕಾಲ ಶ್ರೀ ಮತಿಯವರ ಶವಭಸ್ಮವನ್ನು ಗುಗಾ ನದಿಯಲ್ಲಿ ಕರಡಿದರು. ಸುಮಾರು 40,000 ಜನರು ಜವಾಹರ್ ಲಾಲರ ಜೊತೆಯಲ್ಲಿ ಗಂಗಾ ನದಿಗೆ ಹೋಗಿದ್ದರು. ಅಲ್ಲಿ ಬಾಬು ರಾಜೇಂದ್ರ ಪ್ರಸಾದರವರು ಶ್ರೀಮತಿಯವರ ದೇಶ ಸೇವೆಯನ್ನೂ, ಪತಿಭಕ್ತಿಯನ್ನೂ, ಪರಹಿತ ಚಿಂತನವನ್ನೂ ಸ್ಮರಿಸಿ ಭಾಷಣ ಮಾಡಿದರು.

ವಿದೇಶ.

ಜರ್ಮನಿ ದೇಶದ ಡಾ. ಹರ್ಮನ್ ಗೊಯರ್ಟ್ ಎಂಬ ಬರಹಗಾರನು ಲಂಡನ್ ಪಟ್ಟಣದಲ್ಲಿ ವಾಸಮಾಡಿಕೊಂಡಿದ್ದು ಅಲ್ಲಿನ ವಿಮಾನಯಂತ್ರ ಸೈನ್ಯದ ಒಳಗುಟ್ಟುಗಳನ್ನೆಲ್ಲಾ ತಿಳಿದು ಶತ್ರುಪಕ್ಷದವರಿಗೆ ತಿಳಿಸಲು ಪ್ರಯತ್ನಪಡುತ್ತಿದ್ದನೆಂಬ ಆಪಾದನೆಯ ಮೇಲೆ ಕಳೆದ ಸೋಮವಾರ ಅವನಿಗೆ ನಾಲ್ಕು ವರ್ಷ ಕಠಿಣ ಸಜಾ ಶಿಕ್ಷೆ ವಿಧಿಸಲಾಯಿತೆಂದು ಪ್ರಕಟವಾಗಿದೆ.

ಸಿಲೊನ್ ದ್ವೀಪವನ್ನು ಶತ್ರುಪಕ್ಷದವರು ವಾಯುಮಾರ್ಗದಲ್ಲಿ ಮೂಲಕ ಮುತ್ತಿಗೆ ಹಾಕಿದ ಪಕ್ಷದಲ್ಲಿ ಅಲ್ಲಿನ ಪ್ರಜೆಗಳಿಗೆ ವಿಷ ಗಾಳಿಯಿಂದ ಏನೂ ಅಪಾಯ ಸಂಭವಿಸದಂತೆ ರಕ್ಷಣೆ ಮಾಡಲು ವಾಯುವನ್ನು ಶುದ್ಧ ಮಾಡುವ ಗ್ಯಾಸ್ ಮ್ಯೂಸ್ಕ್ ಎಂಬ ಮುಖವಾಡಗಳನ್ನು ಪ್ರತಿಯೊಬ್ಬ ಪ್ರಜೆಗೂ ಒದಗಿಸಿ ಕೊಡಲು ಸರ್ಕಾರದವರು ಆಲೋಚಿಸುತ್ತಿರುವುದಾಗಿ ಪ್ರಕಟವಾಗಿದೆ.

ಸ್ಪೈನಿನಲ್ಲಿ ಬಿಡುಗಡೆ ಹೊಂದಿರುವ ರಾಜಕೀಯ ಕೈದಿಗಳಿಗೆ ಸ್ವಾಗತವೀಯಲು ಪ್ರಚಂಡ ಮೆರವಣಿಗೆಗಳು ನಡೆದು ಕೆಲವಡೆ ಗಲಾಟೆ ಕೂಡಾ ನಡೆದಿರುವುದು. ಕೇಡಿಜ್ ಎಂಬಲ್ಲಿ ಜನರು, ಪೊಲೀಸರು ನೋಡುತ್ತಿರುವಂತೆಯೇ 13 ಚರ್ಚು ಕಾನ್ವೆಂಟ್ ಮತ್ತು ಶಾಲೆಗಳನ್ನು ನಾಶಮಾಡಿರುವರು. ಕೆಥೋಲಿಕರ 3 ಪ್ರಾಮುಖ್ಯ ಕಟ್ಟಡಗಳು ಮಾತ್ರವೆ ರಕ್ಷಿಸಲ್ಪಟ್ಟಿವೆ. ತೀವ್ರಗಾಮಿ ಪಕ್ಷದ ಸ್ತ್ರೀ ಮೆಂಬರರ ಸನ್ಮಾನಾರ್ಥವಾಗಿ ಮೆಡ್ರಿಡಿನಲ್ಲಿ ದೊಡ್ಡ ಪ್ರದರ್ಶನ ನಡೆದು ಪ್ರಥಮವಾಗಿ ಸ್ತ್ರೀಯರೇ ಭಾಷಣಗಳನ್ನಿತ್ತರು.

ಯುದ್ಧ ವಾರ್ತೆ.

ಮಾರ್ಚ್ ತಾ. 12.

ರಾಜಧಾನಿಯಲ್ಲಿ ಸಿದ್ಧತೆಗಳು.

ಇಟೆಲಿಯವರು ಒಂದು ಭಾರೀ ಆಕ್ರಮಣವನ್ನು ತರದೂರಿನಲ್ಲಿರುವರೆಂದು ತಿಳಿಯಬಂದಿರುವದರಿಂದ ರಾಜಧಾನಿಯಲ್ಲಿ ಸೈನಿಕರನ್ನು ಸೇರಿಸುವ ಕಾರ್ಯವು ಭರದಿಂದ ಸಾಗುತ್ತಲಿದೆ. ನಿವೋನಿಯೂ ಕಾಯಿಲೆಯಿಂದ ಮೃತರಾದ ರಾಸ್ ಮುಲುಗೇಟಾರವೆರ ಬದಲಿಗೆ ಫಿಟರಾರಿ ಬಿರು ಎಂಬವರು ಮುಖ್ಯ ಸೈನ್ಯಾಧಿಪತಿಯೊರಾಗಿ ನೇಮಿಸಲ್ಪಟ್ಟಿರುವರು.

ಮಾರ್ಚ್ ತಾ. 14.

ಮತ್ತೊಂದು ಕಡೆಗಾಗಿ ಆಕ್ರಮಣ.

ಇಟೆಲಿಯ ಸೈನಿಕರು ಈಗ ಇಜಿಪ್ತಿನ ಸುಡಾನಿನ ಕಡೆಗಾಗಿ ಅಬಿಸೀನಿಯಕ್ಕೆ ನುಗ್ಗಲು ಪ್ರಾರಂಭಿಸಿವೆ. ಸೆಬಿಟ್ ನದಿಯ ದಡಕ್ಕಾಗಿ ಅಬಿಸೀನಿಯಕ್ಕೆ ಒಂದು ಸುಲಭ ಹಾದಿ ಇರುವದಾಗಿಯೂ, ಆ ಮೂಲಕ ಅಬಿಸೀನಿಯಕ್ಕೆ ನುಗ್ಗಲು ಸುಲಭವೆಂದೂ ತಿಳಿಯಬಂದಿರುವದರಿಂದ ನಾಲ್ಕು ಸೈನ್ಯ ವಿಭಾಗಗಳು ಒಂದೊಂದು ಮಾರ್ಗವಾಗಿ ಈ ಕಡೆಯಿಂದ ಮುಂದುವರಿಯುತ್ತಲಿವೆ.

ಬಾಂಬಿನ ಧಾಳಿಗೆ ಮಿತಿಯಿಲ್ಲ.

ಇಟೆಲಿಯ ವಿಮಾನಗಳು ಕೊರೆಂ ಬಳಿಯೂ ಮತ್ತು ಅಲಮೂಟ ಎಂಬಲ್ಲಿಗೂ ಬಾಂಬುಗಳನ್ನು ಎಸೆದವು. ಇದರಿಂದ ಇಬ್ಬರು ಮತ್ತು ಎಂಟು ಹೇಸರ ಕತ್ತೆಗಳು ಮಡಿದವು. ಹೆಚ್ಚಿನ ಅನಾಹುತಗಳು ತಿಳಿಯಬಾದಿರುವದಿಲ್ಲ. ರಾಜಧಾನಿಯಾದ ಅಡಿಸ್ ಅಬಾಬದಲ್ಲಿ ಯುದ್ಧ ಸಾಮಗ್ರಿಗಳನ್ನು ಸಾಗಿಸುವ ಕೆಲಸವಲ್ಲದೆ ಮತ್ತಾವ ವಿಧದ ಆಫೀಸು ಕೆಲಸವೂ ನಡೆಯುವದಿಲ್ಲವಂತೆ.

ಮಾರ್ಚ್ ತಾ. 15.

ಉತ್ತರದಲ್ಲಿ ಅಬಿಸೀನಿಯರು ಯುದ್ಧ ಪ್ರಾರಂಭಿಸಿದರು.

ಅಂಬ ಅಲಗಿ ಎಂಬಲ್ಲಿ ಅಬಿಸೀನಿಯರು ಪುನಃ ಯುದ್ಧ ಪ್ರಾರಂಭಿಸಿರುವರೆಂದೂ, ಭಯಂಕರ ಕಾಳಗವು ನಡೆಯುತ್ತಿದೆಯಾಗಿಯೂ, ಅಸಂಖ್ಯಾತ ಇಟಾಲಿಯನರು ಮಡಿದಿರುವರೆಂದೂ ತಿಳಿದು ಬಂದಿದೆ.

ಮುಸೋಲಿನಿಯ ಮಕ್ಕಳಿಗೆ ಬಹುಮಾನ.

ಮುಸೋಲಿನಿಯವರ ವಿಟ್ಟೋರಿಯೋ ಮತ್ತ, ಬ್ರುನೋ ಎಂಬ ಇಬ್ಬರು ಪುತ್ರರು ಯುದ್ಧರಂಗದಲ್ಲಿರುವರಷ್ಟೆ. ಕಳೆದ ಯುದ್ಧ ಸಮಯದಲ್ಲಿ ಅವರು ತೋರಿದ ಅಪ್ರತಿಮ ಸಾಹಸ ಶೌರ್ಯಗಳಿಗಾಗಿ ಇಟೆಲಿಯ ಸೈನಾನಾಯಕರಾದ ಬೊಡೋಗ್ಲಿಯೋರವರು ಅವರಿಬ್ಬರಿಗೂ ಬಹುಮಾನಾರ್ಥವಾದ ಪದಕಗಳನ್ನು ಸನ್ಮಾನಿಸಿರುವರು.

ಮಾರ್ಚ್ ತಾ. 16.

ರಾಸ್ ಸಯೂಮರು ಪುನಃ -

ಹಕ್ಕು ದಿನಗಳ ವರೆಗೆ ಸುಮ್ಮನಿದ್ದು ಪುನಃ ರಾಸ್ ಸಯೂಮರು ಯುದ್ಧ ಪ್ರಾರಂಭಿಸಿರುವರು. ಈ ಸಮಯದಲ್ಲಿ ಕೆಲವೆಡೆಗಳಲ್ಲಿ ಇಟಾಲಿಯನರು ಗೆದ್ದಿರುವರೆಂಬ ಸುದ್ದಿಯು ಪೂರಾ ಸುಳ್ಳೆಂದು ತಿಳಿದು ಬರುತ್ತದೆ. ಅಂಟೆಲೊ ಮತ್ತು ಸ್ಟೆಲಿಕೋಟ್ ಎಂಬಲ್ಲಿ ದೊಡ್ಡ ಕದನಗಳಾಗಿ ಇಟೆಲಿಯ ಸೈನ್ಯಗಳು ಹಿಂದೋಡಿದವು. ರಾಸ್ ಸಯೂಮರು ಅತೀ ಚತುರತೆಯಿಂದ ಸೈನ್ಯಗಳನ್ನು ಹಿಂತಿರಿಗಿಸುತ್ತಲೂ, ಮುಂದೊತ್ತುತ್ತಲೂ ಇರುವರೆಂದು ತಿಳಿಯಬರುತ್ತದೆ.

ಇಟೆಲಿಯವರ ಸುಳ್ಳು ವಾರ್ತೆಗಳು.

ಸಕೋಟವು ಇಟೆಲಿಯವರ ಕೈವಶವಾಯಿತೆಂದೂ, ರಾಸ್ ಕಾಸ್ಸಾರವರು ಇಟೆಲಿಯವರೊಡನೆ ರಾಜಿ ಸಂಧಾನ ಕಾರ್ಯ ನಡೆಸುತ್ತಿರುವರೆಂದೂ, ಚಕ್ರವರ್ತಿಗಳಿಗೆ ದೇಹಸ್ವಾಸ್ಥ್ಯವಿಲ್ಲವೆಂದೂ ಇಟೆಲಿಯವರು ಪ್ರಕಟಿಸಿದ ವಾರ್ತೆಗಳು ನಿರಾಧಾರವಾದುವುಗಳೆಂದು ಅಬಿಸೀನಿಯದ ಪ್ರಕಟಣೆ. ಚಕ್ರವರ್ತಿಗಳು ಯುದ್ಧ ರಂಗಗಳೆಲ್ಲವನ್ನು ಸಂದರ್ಶಿಸುತ್ತಿರುವರು. ಅವರ ಸಂದರ್ಶನದಿಂದ ಸೈನಿಕರಲ್ಲಿ ಉತ್ಸಾಹವು ಇಮ್ಮಡಿಯಾಗಿರುವದು.

ಮಾರ್ಚ್ ತಾ. 17.

ವಿಷಗಾಳಿಯ ಬಾಂಬುಗಳು.

ಏಳು ಇಟೆಲಿಯ ವಿಮಾನಗಳು ಕೊರೆಂ ಮೇಲೆ ವಿಷಗಾಳಿಯ ಬಾಂಬುಗಳನ್ನು ಎಸೆದವು. ಆದರೆ ಹೆಚ್ಚಿನ ಅನಾಹುತಗಳೇನೂ ಆಗಲಿಲ್ಲ.

ಗಲ್ಲಾಗಳ ರಾಜಭಕ್ತಿ.

ಅಬಿಸೀನಿಯಾ ಸರಕಾರದ ಮೇಲೆ ದಂಗೆ ಎಬ್ಬಿಸಬೇಕೆಂದು ಪ್ರೇರೇಪಿಸಿ ಇಟೆಲಿಯವರು 5000 ಗಲ್ಲಾ ಎಂಬ ಜನರಿಗೆ ಕೋವಿ ಕತ್ತಿಗಳನ್ನು ಒಳಗೊಳಗೆ ಕೊಟ್ಟಿದ್ದರು. ಆದರೆ ಆ ಜನಗಳು ತಮಗೆ ದೊರೆತ ಆಯುಧಗಳನ್ನೆಲ್ಲ ಅಬಿಸೀನಿಯಾ ಚಕ್ರವರ್ತಿಗಳಿಗೊಪ್ಪಿಸಿ ತಾವು ಅವರಿಗಾಗಿ ಪ್ರಾಣವನ್ನು ಕೊಡಲೂ ಸಿದ್ಧರಿರುವೆವೆಂದು ವಿಷದಪಡಿಸಿದರು.

ಪಾಶ್ಚಾತ್ಯ ವಿದ್ಯಾಭ್ಯಾಸ.

(ಲೇಖಕಿ:—ಕೆ. ಎಸ್, ಪಾರ್ವತಿ, ಮಡಿಕೇರಿ)

ಇಂಗ್ಲೀಷ್ ವಿದ್ಯಾಭ್ಯಾಸವು, ನಮ್ಮಲ್ಲಿ ವ್ಯಾಪಿಸಿದಂತೆಲ್ಲಾ ಪಾಶ್ಚಾತ್ಯ ನಾಗರಿತೆಯು ದಿನ ದಿನಕ್ಕೆ ಉತ್ಕೃಷ್ಟಿತೆಯನ್ನು ಹೊಂದುತ್ತಿದೆಯಷ್ಟೆ. ಹಾಗೆ ಅಭ್ಯಾಸಾಭ್ಯಾಸಗಳಲ್ಲಿ ವಿಚಾರಶೀಲರಾದ ಕೆಲಮಂದಿಯ ವಿನಹ ಮಿಕ್ಕ ಅನೇಕರು, ಆ ಪರದೇಶಿಯರ ಕೇವಲ, ವೇಷಭಾಷಾ, ಭೂಷಣಾದಿಗಳಿಗೆ ಮರುಳಾಗಿ ಅವರು ಹಾಕುವ ತಾಳಕ್ಕೆ ಸರಿಯಾಗಿ ನರ್ತಿಸುತ್ತಾ ಅವರನ್ನು ಅನುಸರಿಸತೊಡಗಿರುವರು. ನಮ್ಮ ತಾಯ್ನಾಡಿನ ಆರ್ಯರ ಪೂರ್ವಕಾಚರಣಗಳೇ ಅವರಿಗೆ ಅಸಹ್ಯವಾಗಿ ತೋರಲುದ್ಯುಕ್ತವಾದುವು. ಸಹೋದರರೇ ಇದೂ 'ಮಣಿದ ಕಾಲಕ್ಕೆ ಮದ್ದಿಲ್ಲ ಕೆಡುವ ಕಾಲಕ್ಕೆ ಬುದ್ಧಿಯಿಲ್ಲ' ಎಂಬ ಹಿರಿಯರ ಗಾದೆಯಂತಾಯಿತು. ಗಾದೆಯು ಒತ್ತಟ್ಟಿಗಿರಲಿ, ನಮ್ಮ ಪೂರ್ವಿಕರಾಚರಣೆಗಳನ್ನು ಅನುಸರಿಸುವುದು ಸಹ ಹುಚ್ಚುತನವೆಂದು ತಮ್ಮ ತನ್ನೊಳಗೆ ಗುಣಾಕಾರವನ್ನು ಮಾಡುತ್ತಾ ವ್ಯಾಖ್ಯಾಯೆನಗಳನ್ನು ಮಾಡತೊಗಿದರು. ಈ ನವೀನ ನಾಗರಿಕತೆಯು ಅಷ್ಟಕ್ಕೆ ನಿಂತಿತೇ! ಇಲ್ಲ ಮುಂದುವರಿಯುತ್ತಲೇ ಇದೆ, ಅದಕ್ಕೆ ಕಾಲುಗಳಾದರೂ ನೋಯುವವೇ? ನೀವೆಲ್ಲರೂ ನೋಡುವಂತೆ ರಾತ್ರೆ, ಹಗಲೂ ನಡೆಯುತ್ತಲೇ ಇದೆ.

ಸಹೋದರರೇ ನಿವೆಲ್ಲರೂ, ವೀರಮಾತೆಯ ಪುತ್ರರಲ್ಲವೇ? ಅದನ್ನು ಹೊರದೂಡಲು, ನಿಮ್ಮಿಂದ ಸಾಧ್ಯವಿಲ್ಲವೇ? ಅಥವಾ ನಿಮ್ಮ ಬಾಹುಗಳಲ್ಲಿ ಶಕ್ತಿ ಇಲ್ಲವೆ? ಹಿಂದಿನ ವೀರತ್ವವೆಲ್ಲಿಹೋಯಿತು? ಇದೇನು ಆಲಸ್ಯ ಇದೇನು ಆಡಂಬರ ಇದೇನು ನಕಲು ಇದೇನು ಗುಲಾಮತನ? 'ಮಾತೆ, ಭೂಮಾತೆ ನಿನ್ನ ಪುತ್ರರು ಅಡ್ಡದಾರಿಯನ್ನು ಹಿಡಿದು ಆ ತಪ್ಪು ತಾಳಕ್ಕೆ ಗಾನವೂಡುತ್ತಾ, ನರ್ತಿಸುವುದು ಸಹ ನಿನ್ನ ಕಂಣಿಂದ ನೋಡಬೇಕೆಂದಿತ್ತೆ'?

ಇರಲಿ, ಇದು ಇಷ್ಟು ಮಾತ್ರಕ್ಕೆ ನಿಂತಿತೇನು? ಇದು ನಮ್ಮ ಗೃಹದೊಳಗೂ ಪ್ರವೇಶಿಸಿತು. ಮತ್ತೇನು ಕೇಳುವುದು? ಮನೆಗೆ ಬಂದವರು ಹೊಸಬರಲ್ಲವೇ? ಕೆಲ ಕೆಲವು ಸ್ಥಳಗಳಲ್ಲಿ ಸ್ತ್ರೀಯರು ಆ ಪಾಶ್ಚಾತ್ಯ ಸ್ತ್ರೀಯರನ್ನು ನೋಡಿದ್ದೆತಡ, ತಮ್ಮ ನಿತ್ಯ ಕರ್ಮಕ್ಕೂ. ಉಡಿಗೆ ತೊಡಿಗೆಗಳಿಗೂ, ತಿಲಾಂಜಲಿಯನ್ನೇ ಕೊಟ್ಟುಬಿಟ್ಟರು. ಸಹೋದರಿಯರೇ ನೀವು ನಿಮ್ಮ ಉಡಿಗೆ ತೊಡಿಗೆಗಳಿಗಂತೂ, ತಿಲಾಂಜಲಿಯನ್ನು ಕೊಟ್ಟಿರಿ. ನಿತ್ಯಕರ್ಮವನ್ನು ಸಹ ಮರೆತುಬಿಟ್ಟಿರೋ? ಆಹಾರ ಪಾನೀಯಗಳೂ, ಉಡಿಗೆ ತೊಡಿಗೆಗಳೂ, ಏನೋ ಮನಬಂದಂತೆ ಇರುವದಕ್ಕಲ್ಲ. ಹಾಗೆಯೇ ವಿದ್ಯಾಭ್ಯಾಸವೂ ಸಹ ಬರಿ ಡಂಭಕ್ಕೋಸುಗವಲ್ಲ. ಪ್ರತಿಯೊಂದಕ್ಕೂ ಉದ್ದೇಶವಿದೆ; ಪ್ರತಿಯೊಂದಕ್ಕೂ ಅರ್ಥವಿದೆ. ನೀವು ಮಾತ್ರ 'ಹೋತನು, ಹಿಂದು ಮುಂದು ನೋಡದೆ ಬಾವಿಗೆ ದುಮುಕಿದ ಹಾಗೆ' ದೂರದೃಷ್ಟಿಯನ್ನಿಟ್ಟುಕೊಳ್ಳದೆ ಹಾರಿದಿರಿ. ಅಲ್ಲದೆ ಅವುಗಳ ಅಂತರಹಸ್ಯಗಳನ್ನು ಕುರಿತು ಯೋಚಿಸಲೇ ಇಲ್ಲ. ಯೋಚಿಸಿದ್ದರೆ ಅವುಗಳ ಘನವಾದ ಉದ್ದೇಶಗಳು ಗೋಚರಿಸುತ್ತಿದ್ದವು.

ಹೆಚ್ಚಾಗಿ ಈಗಿನ ಭಗಿನಿಯರ ಭಾವನೆಯೇನೆಂದರೆ ಸ್ತ್ರೀಯು ಸರಿಜಾರಿಣಿಯೊಗಿಯೂ, ಪುರುಷನು ಪ್ರಭುವಾಗಿಯೂ ಇರುವನು. ಪುರುಷನಿಗೆ ಸರ್ವ ಸ್ವಾತಂತ್ರ್ಯವೂ ಇದೆ. ಸ್ತ್ರೀಯು ಮೊತ್ತ ದಾಸಿಯಂತೆ ಮನೆಯಲ್ಲಿ ದುಡಿಯುತ್ತಿರುವಳು ಇದು ತಪ್ಪು ಭಾವನೆ, ಒಂದು ಮಗುವನ್ನು ಅದರ ಮೊತ ತಿಪೃಗಳು, ತನ್ನ ಮಗು ತನ್ನ ಮಗು ಎಂದು ವ್ಯಾಜ್ಯವಾಡಿದ ಹಾಗಾಯಿತು. ಅಲ್ಲದೆ ಎರಡು ಅಕ್ಷಿಗಳು ಐಕ್ಯಭಾವದಿಂದ ಒಂದು ಪದಾರ್ಥವನ್ನು ನೋಡುವಂತೆಯೇ ಇವರಿಬ್ಬರೂ ತಾನು ಮೇಲು ತಾನು ತಾನು ಕೀಳು ಎಂದು ಭಾವಿಸದೆ ತಮ್ಮ ಗೃಹಕೃತ್ಯಗಳನ್ನು ನಡೆಸಬೇಕು. ತನ್ನ ಮನೆಯು ಸುಖರಂತೋಷಗಳಿಗಾಗಿ ಮಾಡುವ ಕೆಲಸವನ್ನು ದಾಸ್ಯವೆಂದು ತಿಳಿಯುವುದಾದರೆ, ಪುರುಷನು ಸಂಸಾರಕ್ಕಾಗಿ ದುಡಿದು ಹಾಕಬೇಕಾದ ತನ್ನ ವೃತ್ತಿಯನ್ನು ಪ್ರತಿ ದಿನವು ಬಂಡಿಯೆಳೆಯುವ ಎತ್ತಿನಂತೆಯೇ ಸರಿ. ಸಹೋದರರೂ, ಸಹ ಸ್ತ್ರೀಯರು ಮಾಡುವ ಕೆಲಸವು ದಾಸ್ಯವೆಂದೇ ತಿಳಿದಿರುವರು. ಈ ಭಾವನೆಯು ತಪ್ಪು. ನಮ್ಮ ಭಾರತ ಮಾತೆಯ ಸೃಷ್ಟಿಯಲ್ಲಿ ದಿನವೂ ಒಂದೊಂದು ಕೃತಿಯೂ, ನಮ್ಮ ಜೀವನದ ಯಾತ್ರೆಯಲ್ಲಿನ ಆತ್ಮಾಭಿವೃದ್ಧಿಯ ಮಾರ್ಗದಲ್ಲಿ ಒಂದೊಂದು ಅಡಿಯನ್ನಿಡುತ್ತಾ, ಜನ್ಮಸಾರ್ಥಿಕ್ಯದ ಕಡೆಗೆ ನಡೆಯಲು ಅನುಕೂಲವಾಗಿ ಏರ್ಪಟ್ಟಿವೆ. ಭಗಿನಿಯರೇ ಮನೆಗೆಲಸಗಳು ದಾಸ್ಯಕ್ಕಾಗಿ ಮಾಡುವುವುಗಳಲ್ಲ ಇದರಿಂದ ಅತ್ಯುತ್ತಮ ಅಂಗಸಾಧನೆ ಮಾಡಿದಂತಾಗುವುದು. ಇದರಿಂದ ಇಂಗ್ಲೀಷ್ ವಿದ್ಯೆಯನ್ನು ಕಲಿಯಬಾರದೆಂದಲ್ಲ ಮತ್ತು ಅವನ್ನು ಕಲಿಯುವುದರಿಂದಲೇ ಈ ಅನರ್ಥವು ಸಂಭವಿಸುವುದೆಂದಲ್ಲ. ಹಿಂದೂ ನಾಗರಿಕತೆಯ ಶ್ರೇಷ್ಠತತ್ವಗಳನ್ನು ಗಮನಿಸಿ ಆರ್ಯ ಸ್ತ್ರೀ ಯೋಗ್ಯವಾದ ಘನ ಗಾಂಭೀರ್ಯಾದಿಗಳನ್ನು ಯೋಚಿಸಿ ಪಾಶ್ಚಾತ್ಯ ಸ್ತ್ರೀಯರನ್ನು ನೋಡಿ ಅವರಲ್ಲಿಯ ಅತ್ಯುತ್ತಮ ಗುಣಗಳನ್ನು ಗ್ರಹಿಸಿ, ಅದನ್ನು ನಮ್ಮವರ ಅಭಿವೃದ್ಧಿಗಾಗಿ ಉಪಯೋಗಿಸಬೇಕಲ್ಲದೆ, ಅವರನ್ನು ಅನುಕರಿಸುವುದಲ್ಲ. ಪ್ರಾಜ್ಞರಾದ ಕರ್ಣಾಟಕ ಸಹೋದರ ಸಹೋದರಿಯರೇ ಈ ವಿಷಯಗಳನ್ನು ಗಮನಕ್ಕೆ ತಂದು ತನ್ಮೂಲಕ ಇತರರಿಗೂ, ಮಾರ್ಗದರ್ಶಕರಾಗುತ್ತಾ ಬರಬೇಕೆಂಬುದೇ ಈ ಲೇಖನದ ಉದ್ದೇಶ.

Dr. Francis Pinto,

DENTIST.

Virajpet, S. Coorg.

Free consultation.

Treatment for any kind of tooth trouble. Extraction and stuffing done with out any pain, Artificial teeth set very atractively and durability gaurenteed. Charges very Moderate

4—4

FOR SALE.

Hutti Estate for Sale.

Mercara—Somwarpet Mile 10,

43 acers Coffee, 43 acres Jungle, 10½ acers Wet-lands, pulp house, lines, and bungalow. No reasonable offer refused.

Apply—
Mrs. Davies,
Suntikoppa.

4—1

ಏಜೆಂಟರು ಬೇಕಾಗಿದೆ.

(1) ಬೊಂಬಾಯಿಯ ಪ್ರಸಿದ್ಧ ಬೆಬ್ ಕೆಮಿಕಲ್ ವರ್ಕ್ಸ್ ಇವರ "ಬೆಬುಲಿನ್" "ಹೆಮೆಟೋನ್" ಬಿಯೊಕಾರ್ಡಿಯಲ್, (2) ಹೆನ್ರಿ ದಿವಾನ್ ಇವರ 'ಫೆಮೀ, ಜವ', ಮೇರಿ,' ಬಿಸ್ಕಿಟುಗಳು, (3) ಲಸ್ಪರ ಮೆನುಫೆಕ್ಚರಿಂಗ್ ಕಂಪೆನಿಯವರ "ಲಸ್ಪರ್', ಮೇಹದ್ವಂಸಿನಿ, ವೆಪ್ಸಿನ್', ದಂತಮಂಜನ," ಇವುಗಳನ್ನು ವ್ಯಾಪಾರಮಾಡಲು ಕೊಡಗಿನ ಮುಖ್ಯ ಪಟ್ಟಣಗಳಲ್ಲಿ ಏಜಂಟರು ಬೇಕಾಗಿರುವರು. ಕಾರ್ಯಕುಶಲರಾದವರು, ಶರ್ತಗಳಿಗಾಗಿಯೂ, ವಿವರಕ್ಕಾಗಿಯೂ ಈ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು:—

X,
C/o. **"Kodagu" Ltd.,**
Mercara.

4—2

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲಾತ್ತಡಲು ಒಪ್ಪಿಕೊಂಡಿದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್‌ರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ಪಯುಎಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಸಬ್ ಏಜೆಂಟರುಗಳು.

ವಿರಾಜಪೇಟೆ—ಮೆ. ಮಂಡೇಪಂಡ ಸೋಮೆಯ್ಯನವರು,
ಅಮ್ಮತ್ತಿ—ಸಿದ್ದಾಪುರ—ಮೆ. ಐನಂಡ ಮಾದಪ್ಪನವರು,
ಪೊನ್ನಂಪೇಟೆನಾಡು—ಮೆ. ಪಿ. ಜಿ. ಮುದ್ದಮೆಯ್ಯನವರು
ಹುದಿಕೇರಿ & ತಿತಿಮತ್ತಿ—ಮೆ. ಜಿ. ಮಾದಮೆಯ್ಯನವರು,
ಸುಂಟಿಕೊಪ್ಪ—ಮೆ. ಅಪ್ಪಚಟ್ಟೋಳಂಡ ಮಾಚಯ್ಯನವರು,
ಸೋಮವಾರಪೇಟೆ—ಮೆ. ಕೆ. ಮೊಗಪ್ಪನವರು
ನಾಪೋಕ್ಲು—ಮೆ, ಬೆಳ್ಳಿಪಂಡ ಯಂ, ಪೂಣಚ್ಚನವರು,
(ನಾಪೋಕ್ಲು ಸ್ಟೋರ್ಸ್)

ಸೂಚನೆ.—ಸ್ಪಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ.

"ಅಹ! ನಿನಗೆ ಎಂಥ ಜಾಣನಾದ ಅಗಸನು ಬಟ್ಟೆಯೊಗೆಯುತ್ತಿರುವನು! ನಿನ್ನ ವಸ್ತ್ರಗಳೆಲ್ಲವೂ ಎಷ್ಟು ಶುಭ್ರವಾಗಿವೆ."

"ಅಗಸನೇ? ಏನು ನನ್ನ ಈ ವಸ್ತ್ರಗಳನ್ನೆಲ್ಲವನ್ನು ನಾನೇ 501 ಸೋಕ್‌ನ ಸಾಬೂನಿನಿಂದ ಒಗೆದೆನು."

ವೆಚ್ಚ ಕಡಿಮೆ.
ವಸ್ತ್ರ ಬಾಳಿಕೆ.
ಶ್ರಮ ಅತೀ ಕಡಮೆ!

ಟಾಮ್‌ಕೋ ವೂರಾಟದ ಮಳಿಗೆ, TOMCo ೧. ಸೆಂಟ್ರಲ್ ಸ್ಟ್ರೀಟ್, ಬೆಂಗಳೂರು ದಂಡು.

501 Soap

ತಯಾರಿಸುವವರು—ತಾತಾ ಆಯಿಲ್ ಮಿಲ್ಸ್, ಕಂಪೆನಿ, ಲಿಮಿಟೆಡ್, ಬೊಂಬಾಯಿ, ಮತ್ತು ತಾತಾಪುರ.

52-43. ಕೊಡಗಿನ ಡಿಸ್ಟ್ರಿಬ್ಯೂಟರ್—ಬಿ. ಎಸ್ ಸುಬ್ಬಣ್ಣ, ಸಂತೆಪೇಟೆ, ಮೈಸೂರು.

ನೂತನ! ಮನೋಲ್ಲಾಸಕರ!! ಶುಚಿಕರ!!! ಆದರ್ಶ ವಿಶ್ರಾಂತಿಗೃಹ!!!!

ಬೊಂಬಾಯಿ ರೆಸ್ಟೋರೆಂಟ್

ಇದೇ ತಾ. 19—12—1935ರಲ್ಲಿ ಮಡಿಕೇರಿ—ಚೌಕಿಯಲ್ಲಿರುವ ಹೊಸ ಕಟ್ಟಡದಲ್ಲಿ ತೆರೆಯಲ್ಪಟ್ಟಿದೆ.

ಆರೋಗ್ಯಕರವೂ ಆಧುನಿಕವೂ ಆದ ಉಪಹಾರ ಗೃಹವೊಂದನ್ನು ನಿರೀಕ್ಷಿಸುವ ಮಹನೀಯರುಗಳ ಸೌಕರ್ಯಕ್ಕಾಗಿ ತೆರೆಯಲಾಗಿರುವುದು.

ಶುದ್ಧವೂ, ಪುಷ್ಟಿಕರವೂ, ಆರೋಗ್ಯಕರವೂ ಆದ ತಿಂಡಿತಿನಿಸುಗಳನ್ನೂ

ಕಾಫಿ—ಚಹಾ—ಕೊಕೊ—ಶರ್ಬತ್ತು ಇತ್ಯಾದಿ ಪಾನೀಯಗಳನ್ನೂ—

ಕೇವಲ ಹಲವು ವರ್ಷಗಳ ಅನುಭವಿಕರಿಂದ ತಯಾರಿಸಲ್ಪಡುವುದು.

ಗಿರಾಕಿಗಳ ಸೌಕರ್ಯವನ್ನು ಲಕ್ಷಿಸಿ, ಆಸನಗಳ—ವಿಶಾಲ ಕೊಠಡಿಗಳ—ಕಾರ್ಯೋತ್ಸಾಹೀ ವಿನೀತ ಸೇವಕರ ಏರ್ಪಾಡ ಇದೆ.

ಆಯಕ್ಕೆ ತಕ್ಕ ವ್ಯಯ ಮಾಡುವವರು, ವ್ಯಯಕ್ಕೆ ತಕ್ಕ ಆಯವನ್ನು ಹೊಂದಬೇಕಾದ ಅತ್ಯಾಧುನಿಕ ಈ ವಿಶ್ರಾಂತಿಗೃಹದಲ್ಲಿ—

ನೀವು ಅಪೇಕ್ಷಿಸಿದ—ನೀವು ವಿರೀಕ್ಷಿಸಿದ—ನೀವು ಹೊಂದಲೇಬೇಕಾದ—
ಸಕಲ ಆನಕೂಲತೆಗಳನ್ನು ಕಂಡು, ಪೂರ್ಣ ತೃಪ್ತಿಹೊಂದಿರಿ.

ಮದುವೆ ಮತ್ತು ಉಪನಯನ ಸಮಾರಂಭಗಳಲ್ಲಿಯೂ ಮತ್ತು "ಟೀ"ಪಾರ್ಟಿ—
"ಎಟ್-ಹೋಮ್"ಗಳಲ್ಲಿಯೂ ನಮ್ಮನ್ನು ಮರೆಯಬೇಡಿ.

52—14 ಪ್ರೊಪ್ರೈಟರ್:—ನಾರಾಯಣ ರಾವ್, ಗಾಯತೊಂಡೆ.

ಪ್ರಸಿದ್ಧ ಔಷಧಗಳು.

ಮಲೇರಿಯಾಕ್ಕೆ ಒಂದೇ ಸಿದ್ಧೌಷಧ.

ಶುದ್ಧವಾದ ಹಿಂದೂಸ್ಥಾನದ ಮೂಲಿಕೆಗಳಿಂದ ತಯಾರಾದದ್ದು.
ಕ್ವಿನಿನ್ನನ್ನು ಯಾವ ರೂಪದಲ್ಲೂ ಸೇರಿಸಿಲ್ಲ.

"ನವರತ್ನ ಅಲ್ಮಾರಿಯಾ"

ಹಿಂದೂದೇಶದ ಔಷಧಗಳ ವಿಚಾರದಲ್ಲಿ ಶ್ರೇಷ್ಠತೆಯನ್ನು ಪಡೆದ ಡಾ. ಕೆ. ಯಂ ನಾಡ್ಕರ್ಣಿ ಮತ್ತು ಡಾ. ಕೆ. ಸಿ. ಬೋಸ್‌ರವರ ಗ್ರಂಥಗಳಿಗನುಗುಣವಾಗಿ ಅತೀ ಪರಿಣಾಮಕಾರಕ ಔಷಧಗಳ ಸಂಯೋಜನೆಯಿಂದ ತಯಾರಿಸಲ್ಪಟ್ಟ ಈ ಔಷಧವು ಹೆಚ್ಚು ಫಲಕಾರಿಯಾಗಿರುವುದು.

ಇದರಲ್ಲಿರುವ ಔಷಧಗಳು.

1. Andrographis Paniculate
2. Cocculas Cordifolius
3. Berriberies Aristata
4. Vernonis Cinerarea
5. Evolvulas Alsinoides
6. Dashmoola
7. Aconitum Heterophylum
8. Alstonia Scholaris

ಮಲೇರಿಯಾಕ್ಕೆ ಅತ್ಯುತ್ತಮ ಔಷಧಿ. ಕ್ವಿನಿನ್ನನ್ನು ಯಾವ ವಿಧದಲ್ಲೂ ಸೇರಿಸದೆ ಯಾವ ಬಾಬಿನಲ್ಲೂ ಹಾನಿಕರವಾಗದ ಸಂಜೀವನಿ. ಇದನ್ನು ಎಷ್ಟು ಸೇವಿಸಿದರೂ ಕ್ವಿನೀನ್ ಸೇವನೆಯಿಂದ ಉಂಟಾಗಬಹುದಾದ ಮಹಾ ಹಾನಿಗಳ ಭಯವೇ ಇಲ್ಲ. ಒಮ್ಮೆ ಪರೀಕ್ಷಿಸಿದಲ್ಲಿ ಮತ್ತೆ ಬಿಡಲಾರಿರಿ.

ತಯಾರಿಸುವವರು:—ದಿ ನವರತ್ನ ಫಾರ್ಮಸಿ,
ಪೋ. ಬಾ. ನಂಬರು 68, ಕೊಚಿನ್.

ಸ್ಟೋಕಿಸ್ಟ್—ಎ. ಎಸ್. ಮೂಚಯ್ಯ, ಒಟ್ಟಿ ವ್ಯಾಪಾರಿ, ಸಂಟಿಕೊಪ್ಪ. } ಏಜೆಂಟ್—ವಿ. ಬಿ. ಕಾವುತ್, ಮಹದೇವಪೇಟೆ, ಮಡಿಕೇರಿ.

52—41 ನವರತ್ನ ಫಾರಸಿ,

ಟೆಂಡರು ನೋಟೀಸು.

ಕೊಡಗು ಟೆಂಪಲ್ ಫಂಡ್ಸ್ ಕಮಿಟಿ ಪ್ರೆಸಿಡೆಂಟರವರ ಆಫೀಸಿನಿಂದ.

ಇಲಾಖಾ ದೇವಸ್ಥಾನಗಳ ಖರ್ಚಿಗೆ ಈ ಕೆಳಗೆ ನಮೂದು ಳ್ಳ ಸಾಮಾನುಗಳನ್ನು ಈ ಬರುವ ಏಪ್ರಿಲ್ ಲಾಗಾಯಿತು. ಒಂದು ವರ್ಷದ ವರೆಗೆ ಮಡಿಕೇರಿ ಟೌನಿನಲ್ಲಿ ಸಪ್ಲೈ ಕೊಡುವಂತೆ ಯಾವ ಯಾವದರಲ್ಲಾ ಕಂಟ್ರಾಕ್ಟು ವಹಿಸಿಕೊಳ್ಳುತ್ತೀರೆಂಬದಕ್ಕೆ ನಮೂದಿಸಿ ಸೀಲು ಹಾಕಿದ ಅವರವರ ಟೆಂಡರುಗಳನ್ನು ಈ ತಾರೀಕು ಅಖೈರೊಳಗೆ ಈ ಕೆಳಗೆ ಸೈನು ಮಾಡಿದವರಿಗೆ ತಲಪುವಂತೆ ಕಳುಹಿಸಿ ಕೊಡುವುದು.

ಬೇಕಾಗುವ ಸಾಮಾನುಗಳ ತಪಶೀಲ್.

ಉಪ್ಪು, ತೊಗರಬೇಳೆ, ಸಂಬಾರ, ಸಾಸುವೆ, ಉದ್ದು, ಹೆಸರು, ತಡಗಣಿ, ಮೆಂತೆ, ಅವರೆ, ಕಡಲೆ, (ಸೇರು ಲೆಕ್ಕದಲ್ಲೂ) ಹಸುವಿನ ತುಪ್ಪ, ಬೆರಕೆ ತುಪ್ಪ, ಒಳ್ಳೆಣ್ಣೆ, ತೆಂಗಿನೆಣ್ಣೆ, ಬೆಲ್ಲ, ಮೆಣಸಿನಕಾಯಿ, ಹುಣಸೆಹಳಿ, ಜೀರಿಗೆ, ಅರಸಿನ, ಬೂರ ಸಕ್ಕರೆ, ಕರ್ಪೂರ ಸಾಂಬ್ರಾಣಿ, (ಮಣ ಲೆಕ್ಕದಲ್ಲೂ) ಸಪ್ಲೈ ಕೊಡುವಂತೆ ಟೆಂಡರು ಕಳುಹಿಸಿಕೊಡುವದು.

ಕೆ. ಕಾಳಪ್ಪ,
(ಪ್ರೆಸಿಡೆಂಟ್)

ಆದಿ ಶ್ರೀ ಕಾವೇರಿ ಬಸ್ಸ್ ಸರ್ವಿಸ್ ಲಿಮಿಟೆಡ್, ಮಡಿಕೇರಿ.

ಮೇಲ್ಕಂಡ ಕಂಪೆನಿಯಿಂದ ಶೇರು ಹೊಂದಿಕೊಂಡ ಮಹನೀಯರುಗಳು.

(ಮುಂದುವರಿದದ್ದು)

ಮೆ. ನುಚ್ಚಿಮಣಿಯಂಡ ಮೋದಪ್ಪನವರು ಪ್ಲಾಂಟರು, ಮೂರ್ನಾಡು.	5 ಶೇರುಗಳು

(ಆದಿ ಶ್ರೀ ಕಾವೇರಿ ಬಸ್ಸು ಸರ್ವಿಸಿನ ಮೂಲೀಕರಿಂದ ಈ ವೊದಲು ಕೊಡಲ್ಪಟ್ಟ ಫ್ರಿಪಾಸು ಮತ್ತು ರಿಯಾಯಿತಿಯ ಪಾಸುಗಳು ಇನ್ನು ಮುಂದೆ ರದ್ದಾಗತಕ್ಕದೆಂದು ಈ ಮೂಲಕ ತಿಳಿಸಲಾಗಿದೆ. ಮುಂದಕ್ಕೆ ಜಾಗೇನಾದರೂ ಬೇಕಾದವರು ಆದಿ ಶ್ರೀ ಕಾವೇರಿ ಬಸ್ ಸರ್ವಿಸು ಲಿಮಿಟೆಡ್, ಮಡಿಕೇರಿ. ಇದರ ಸೆಕ್ರೆಟರಿಯವರಿಗೆ ಬರೆದುಕೊಳ್ಳಬೇಕು.)

ಯು. ಯಂ. ಅಂಚೆಯ್ಯ,
8—6 ಸೆಕ್ರೆಟರಿ.

ನೋಟೀಸು.

ಕೂಡಿಗೆ ಗ್ರಾಮದಲ್ಲಿರುವ (1) ಬಸವರಾಜಯ್ಯ, (2) ಸೋಮೂಚಾರಿ ಸಹ ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ:—

ನಮ್ಮ ದೊಡ್ಡ ತಂದೆ ಮಗನಾದ ಬಸಪ್ಪನೆಂಬವನು ಪೌತಾಗಿ ಆತನ ಹೆಂಡತಿ ಕೆಂಪವ್ವನೆಂಬವಳೂ, ಸುಮಾರು ಮೂರು ವರ್ಷ ಪ್ರಾಯದ ಒಂದು ಹೆಣ್ಣು ಮಗವೂ ಸಹ ಇರುತ್ತಾರೆ.

ಇವಳು ನಮಗಳ ಪಿತ್ರಾರ್ಜಿತವಾದ ಸ್ವತ್ತನ್ನು ಯಾ ಸ್ವತ್ತಿನ ಕೆಲವು ಭಾಗಗಳನ್ನು ನಾಹಕಕ್ಕಾಗಿ ಮಾರಾಟ ಮಾಡುತ್ತಾಳೆಂಬ ವರ್ತಮಾನ ತಿಳಿಯುತ್ತೇವೆ. ಹಾಗೆ ಅವಳು ಪರಾಧೀನ ಮಾಡಲು ನಮ್ಮ ವಿನಹ ಆಕೆಗೆ ಯಾವ ಅಧಿಕಾರವೂ ಇರುವುದಿಲ್ಲ. ಇದನ್ನು ವಿರೋಧ ಯಾರೇ ಆಗಲೀ ಆಕೆಯಿಂದ ನಮ್ಮ ಸಮ್ಮತಿ ವಿನಹ ಗಿರ್ವಿ, ಬೋಗ್ಯ, ಕ್ರಯ ವಗೈರೆ ಮಾಡಿಸಿಕೊಂಡಲ್ಲಿ ಅದು ಊರ್ಜಿತವಾಗತಕ್ಕದ್ದಲ್ಲವೆಂಬ ಸಂಗತಿಯನ್ನು ಈ ಮೂಲಕ ತಿಳಿಸಿರುತ್ತೇವೆ.

ಕೂಡಿಗೆ, ಬಸವರಾಜಯ್ಯ,
ತಾ: 12—3—36. ಸೋಮೂಚಾರಿ.

ಪತ್ರವ್ಯವಹಾರ.

[ಪತ್ರಿಕಾದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾ ಕರ್ತರು ಜವಾಬ್ದಾರರಲ್ಲ. ಸಂ]

ಕೊಡಗು ವೀರಶೈವ ವಿದ್ಯಾ ನಿಧಿ.

ಅಯ್ಯಾ,

ಕೊಡಗು ವೀರಶೈವ ವಿದ್ಯಾ ನಿಧಿಯು ಕೆಲವು ವರ್ಷಗಳಿಂದ ನಿದ್ರಾವಸ್ಥೆಯಲ್ಲಿದ್ದದನ್ನು ಎಚ್ಚರಿಸಿ, ಅದರ ಉದ್ದೇಶವನ್ನು ನೆರವೇರಿಸಲು ಪುನಹ ಕೆಲಸ ಪ್ರಾರಂಭಿಸಬೇಕೆಂದು ಅ

ದರ ಪ್ರೆಸಿಡೆಂಟರು ಮತ್ತು ಕಮಿಟಿ ಮೇಬರುಗಳಿಗೆ 'ಕೊಡಗು' ಪತ್ರಿಕೆಯ ತಾ. 20—4—35, 11—10—35 ಮತ್ತು 25—10—35ರ ಸಂಚಿಕೆಗಳಲ್ಲಿ ವಿನಂತಿ ಮಾಡಲಾಗಿತ್ತು. ಆ ವುಗಳಿಂದ ಪ್ರಯೋಜನವೇನೂ ಆಗದ್ದರಿಂದ ಪುನಹ ತಾ. 22—12—38ರ ಪತ್ರಿಕೆಯಲ್ಲೂ ಎಚ್ಚರಿಸಲಾಯಿತು. ಇದರ ಮಧ್ಯೆ ತಾ. 12—11—35 ರಲ್ಲಿ ಮೆ. ಮುಳ್ಳೂರು ಅರೇಗಾಡರ ಅಧ್ಯಕ್ಷತೆಯಲ್ಲಿ ಒಂದು ವಿೂಟಿಂಗು ನಡಿಸಿ, ತಾ. 5—12—35 ಕ್ಕೆ ಕೊಡ್ಲಿಕಲ್ಲು ವಂಶಕ್ಕೆ ಒಂದು ವಿೂಟಿಂಗಿಗಾಗಿ ಬರಬೇಕೆಂದು ಈ ನಿಧಿಯ ಅಧ್ಯಕ್ಷರಿಗೆ ರಿಜಿಸ್ಟರ್ ನೋಟೀಸು ಮೂಲಕ ತಿಳಿಸಿದರೂ ಕೂಡ ಅವರು ಗಮನಿಸಲಿಲ್ಲವೆಂಬುದು ವಿಷಾದಕರ: ಆದರೆ ಒಂದು ಇಡೀ ಕೋವಿನವರ ಕೋರಿಕೆಯನ್ನು ನಿರಾಕರಿಸಿ ನಡೆಯಲು ಯಾರಿಗೂ ಸಾಧ್ಯವಿಲ್ಲ. ಆದುದರಿಂದ ಸದರಿ ನಿಧಿಯ ಜನರಲ್ ವಿೂಟಿಂಗೊಂದು ತಾ. 12—4—36 ರಲ್ಲಿ ದಿ. ಬ. ಕೆ ಚಂಗಪ್ಪನವರ ಅಧ್ಯಕ್ಷತೆಯಲ್ಲಿ ನಡಿಸಲ್ಪಡ್ಡುದೆಂಬ ವರ್ತಮಾನವಿದೆ. ಇದು ನಿಜವಾದರೆ ಈ ನಿಧಿಯ ಜನರಲ್ ವಿೂಟಿಂಗುಗಳನ್ನು ಕಳೆದ ನಾಲ್ಕೈದು ವರ್ಷಗಳಿಂದ ನಡಿಸದೆ ವೀಶೈವ ಮಹಾಸಭೆಯಲ್ಲಿ ಈ ನಿಧಿಯನ್ನು ಕುರಿತು ಉಂಟಾಗಿರುವ ಸಂಶಯಗಳನ್ನು ಪರಿಹರಿಸಿ ಇದರ ಕಲಸ ಕಾರ್ಯಗಳನ್ನು ಮುಂದಾದರೂ ಸಾಂಗವಾಗಿ ನಡಿಸಲಿಕ್ಕೆ ತಕ್ಕ ಏರ್ಪಾಡು ವೂಡಲು ಆ ದಿನದ ಸಭೆಯ ಅಧ್ಯಕ್ಷರು ಸಹಾಯ ವೂಡುವರಾಗಿ ಆಶಿಸುವ.

'ಮನಸೊಂದವ.'

ಮಡಿಕೇರಿ ಪಟ್ಟಣದ ಆರೋಗ್ಯ ಸ್ಥಿತಿ.

ಕೆಲವು ಸಮಯದ ಹಿಂದೆ ಮಡಿಕೇರಿ ಮುನ್ಸಿಪಲ್ ಕಮಿಟಿಯವರು ಪಟ್ಟಣದ ಆರೋಗ್ಯ ಅಭಿವೃದ್ಧಿಯನ್ನು ಸಾಧಿಸಲು ತಕ್ಕ ಸಲಹೆಗಳನ್ನು ಕೊಡಲಿಕ್ಕಾಗಿ ಒಂದು ಉಪ ಕಮಿಟಿಯನ್ನು ನೇವಿಸಿದ್ದರು. ಈ ಉಪ ಕಮಿಟಿಯ 5 ಮೆಂಬರುಗಳಾದ (1) ಎಗ್ಸಿಕ್ಯೂಟಿವ್ ಇಂಜಿನೀಯರ ಪರ್ಸನಲ್ ಅಸಿಸ್ಟೆಂಟರು, (2) ಮೆ. ಯಂ. ಯಂ. ಬೆಳ್ಯಪ್ಪನವರು, (3) ಮೆ. ಪಿ. ಐ ಬೆಳ್ಯಪ್ಪನವರು, (4) ಸೀನಿಯರ್ ಸಬ್ ಅಸಿಸ್ಟೆಂಟ್ ಸರ್ಜನರು ಮತ್ತು (5) ಡಾಕ್ಟರ್ ವಾಯಿಣ್ಣಿಯವರುಗಳ ಪೈಕಿ ಮೊದಲಿನ ಮೂವರು ಸೇರಿ ತಯಾರಿಸಿದ ಈ ಕೆಳಗಿನ ವರದಿಯು ವುನ್ಸಿಪಲ್ ಕಮಿಟಿಗೆ ಒಪ್ಪಿಸಲಾಗಿದೆ.

'ಪಟ್ಟಣದ ಆರೋಗ್ಯ ವಗ್ಗೆರೆ ವಿಷಯಗಳನ್ನು ಕ.ರಿತ ಈ ಮುನ್ಸಿಪಾಲಿಟಿಯ ನಿಬಂಧನೆಗಳು ಸಾಕಷ್ಟು ಸವಿಸ್ತಾರವಾಗಿದೆ. ಅವಶ್ಯಜದ್ದಾಗ್ಗೆ ತರಾವುಗಳ ಮೂಲಕ ಅವುಗಳಲ್ಲಿ ಬದಲಾವಣೆಗಳನ್ನು ವೂಡಿಕೊಳ್ಳಬಹುದು. ತತ್ಕಾಲಕ್ಕೆ ಈಗಿರುವ ರೂಲ್ಸ್‌ಗಳು ಸಾಕು'

ಈಗಿನ ನಿಬಂಧನೆಗಳ ಮೇರೆ ಪೆಟ್ಟಣದ ಆರೋಗ್ಯವನ್ನು ತೃಪ್ತಿಕರವಾಗಿ ಇಡಲು ಸಾಧ್ಯವಿದ್ದರೂ ಕಾರ್ಯನಿರ್ವಾಹಕರು ಅದಕ್ಕೆ ತಕ್ಕಷ್ಟು ನಿಗಕೊಡದ್ದು ವ್ಯಸನಕರ. ಅವರು ಸ್ವಲ್ಪವಾದರೂ ಪ್ರಯತ್ನ ಪಟ್ಟಿದ್ದರೆ ಸ್ಥಿತಿಯು ಉತ್ತಮವಾಗುತ್ತಿತ್ತು. ಇನ್ನು ಮುಂದಾದರೂ ಅವರು ನಿಬಂಧನೆಗಳನ್ನ ನುಸರಿಸಿ ನಡೆಯುವರಾಗಿ ನಾವುತ್ತೇನೆ.

ನಿಬಂಧನೆಗಳನ್ನು ಜಾಗರೂಕತೆಯಿಂದ ನೋಡಿದ ಮೇಲೆ ಈ ಕೆಳಗಿನ ಸಲಹೆಗಳನ್ನು ಸೂಚಿಸುತ್ತೇವೆ.

ಮಲವಿಸರ್ಜನೆಯ ಏರ್ಪಾಡು—ಈ ವಿಷಯ ಕಮಿಟಿಯು ದೀರ್ಘ ಆಲೋಚನೆ ಮಾಡಿ ಈ ಕೆಳಗಿನ ಅಭಿಪ್ರಾಯಪಟ್ಟರು ಪ್ರತಿಯೊಂದು (ಖಾಸಗಿ) ಮನೆಯಲ್ಲೂ ಕಕ್ಕೂಸುಗಳನ್ನಿಟ್ಟು ಅವುಗಳನ್ನು ಮುನ್ಸಿಪಾಲಿಟಿಯವರ ಮೂಲಕವಾಗಲೀ, ಖಾಸಗಿಯಾಗಿಯಾಗಲೀ ಪ್ರತಿನಿತ್ಯವೂ ಶುಚಿವೂಡತಕ್ಕದ್ದು. ದಿನವಹಿ ಶುಚಿವೂಡಿಸಿಕೊಳ್ಳುವ ಕಕ್ಕೂಸನ್ನು ಇಡಲು ಅನುಕೂಲ ಇಲ್ಲದವರೆಲ್ಲರೂ ತೂತಕೊರೆದ (ಬೋರ್ - ಹೋಲ್) ಕಕ್ಕೂಸನ್ನು ಇಟು ಕೊಳ್ಳುವಂತೆ ಬಲತ್ಕರಿಸಬೇಕು. ಬಕ್ಕೆಟ್ ಇಡುವ ಕಕ್ಕೂಸುಗಳನ್ನೂ ಶುಚಿ ವೂಡಲು 1928ನೇ ಜೂನ್ 22ನ ನಂಬರು 49ರ ನೋಟಿಫಿಕೇಶನ್ ಮೇರೆ ಮನೆಯವರಿಂದ ಚಾರ್ಜು ವಸೂಲುವೂಡತಕ್ಕದ್ದು. ಮಲ ಮೂತ್ರಗಳನ್ನು ಕೈಗಾಡ್ತಿಯೊ ಎತ್ತಿನ ಗಾಡಿಯು ಮೂಲಕ ದೂರ ಒಯ್ಯುವ ಏರ್ಪಾಡು ವೂಡಬೇಕು.

ಸಾರ್ವಜನಿಕ ಕಕ್ಕೂಸುಗಳು ಜನರಿಗೆ ಹೆಚ್ಚಿನ ಅನುಕೂಲವಾಡ ಸ್ಥಳಗಳಲ್ಲಿರಬೇಕು ಮತ್ತು ಹೆಚ್ಚಿನ ಜನಸಂಖ್ಯೆ ಇರುವ ಕಡೆಗಳಲ್ಲಿ ಅವುಗಳ ಸಂಖ್ಯೆಯನ್ನು ಹೆಚ್ಚಿಸಬೇಕು.

ಮೂತ್ರ ವಿಸರ್ಜನೆ ಏರ್ಪಾಡು—ಜನ ಸಂಖ್ಯೆ ಹೆಚ್ಚಿರುವ ಕಡೆಗಳಲ್ಲೂ ಮತ್ತು ಆಗಾಗ್ಗೆ ಜನ ಸಂದಣಿ ಸೇರುವ ಕಡೆಗಳಲ್ಲೂ ಮೂತ್ರವಿಸರ್ಜನೆಯ ಕಟ್ಟಡಗಳನ್ನು ವೂಡಬೇಕು

ಕಸ ತೊಟ್ಟಿಗಳು—ಈಗಿರುವ ಕಸ ತೊಟ್ಟಿಗಳು ಬಹು ಕಡಿಮೆ. ಹೆಚ್ಚು ಜನರು ವಾಸವಿರುವ ಕಡೆಗಳಲ್ಲಿ ತೊಟ್ಟಿಗಳನ್ನು ಹೆಚ್ಚಿಸಬೇಕು.

ಚರಂಡಿಗಳು—ಮುಖ್ಯ ಚರಂಡಿಗಳನ್ನೆಲ್ಲಾ ಕಲ್ಲಿನಿಂದ ಹಾಸಬೇಕು ಮತ್ತು ಚೆಕ್ಕೆ ಬಾದಿಯ ಚರಂಡಿಗಳನ್ನು ಮಣ್ಣಿನ ಕೊಳವಿಗಳಿಂದ ಕಬ್ಬಬೇಕು. ಎಲ್ಲಾ ಚರಂಡಿಗಳು ಕೆಲವು ಮುಖ್ಯ ಕೊಳವಿಗಳಿಗೆ ಸೇರಿಸಲ್ಪಟ್ಟು, ಅವುಗಳ ನೀರು ದೂರ ಹೋಗಿ ಬೀಳುವಂತೆ ವೂಡಬೇಕು. ಚರಂಡಿಗಳನ್ನು ಪ್ರತಿನಿತ್ಯವೂ ಶುಚಿ ವೂಡಿಸುವ ಏರ್ಪಾಡು ವೂಡಬೇಕು. ಚರಂಡಿಗಳಲ್ಲಿ ನೀರು ಸರಾಗವಾಗಿ ಹರಿಯುವಂತೆ ವೂಡತಕ್ಕದ್ದು.

ಒಟ್ಟಿ ಒಗೆಯುವ ಸ್ಥಳ—ಆಗಸರಿಗೂ, ಖಾಸಗಿ ಜನರಿಗೂ ಒಟ್ಟಿ ಒಗೆಯಲು ಬೇರೆ ಬೇರೆ ಏರ್ಪಾಡು ವೂಡಬೇಕು. ಜನ ಸಮುದಾಯದವರಿಗೆ ಒಟ್ಟಿ ಒಗೆಯಲು ಬಾವಿಗಳನ್ನು ತೋಡಿಸತಕ್ಕದ್ದು. ಆಗಸರು ಒಟ್ಟಿ ಒಗೆಯುವ ಸ್ಥಳಗಳು ತೋಡುಗಳ ನೀರು ಆಗುವಷ್ಟು ವಟ್ಟಿಗೆ ಕೆಡದೆ ಇರುವಲ್ಲಿ ಅಂದರೆ ಮಡಿಕೇರಿಯ ಸುತ್ತು ಮುತ್ತ, ಹರಿಯುವ ತೋಡುಗಳು ಪಟ್ಟಣಕ್ಕೆ ಸೇರುವಲ್ಲಿ ಇರಬೇಕು.

ಒಟ್ಟಾರೆ ಹೇಳುವುದಾದರೆ, ಮಣ್ಣನ್ನು ಮತ್ತು ನೀರನ್ನು ವಿವೇಚನೆ ಇಲ್ಲದೆ ಕೆಡಿಸುವುದನ್ನು ನಿಲ್ಲಿಸಬೇಕು.

ನೀರು ಸರಬರಾಯಿ—ಪಟ್ಟಣದ ನೀರು ಸರಬರಾಯಿಯನ್ನು ಅಭಿವೃದ್ಧಿಪಡಿಸಲು ತಕ್ಕ ಪರಿಶೋಧನೆ ನಡೆಸಬೇಕು.

ಸುಂಟಿಕೊಪ್ಪ ಕ್ಲಬ್ ದಿನ.

ಸುಂಟಿಕೊಪ್ಪ ಯೂನಿಯನ್ ಕ್ಲಬ್ ದಿನವು ಈ ತಾ 15 ರಲ್ಲಿ ನಡಿಸಲ್ಪಟ್ಟಿತು. ಆಗ್ಯೆ ಈ ಕ್ಲಬ್ಬಿನ ಕಾರ್ಯಕಲಾಪಗಳನ್ನು ಕುರಿತು ಅವರ ಕಾರ್ಯದರ್ಶಿಯವರು ಒಂದು ವರದಿಯನ್ನು ಓದಿದರು. ವಾಚಕ ಮಹಾಶಯರ ತಿಳುವಳಿಕೆಬ್ಯಗ್ಯೆ ಅದರ ಸಾರಾಂಶವನ್ನು ಇಲ್ಲಿ ಕೊಟ್ಟಿರುತ್ತೇನೆ.

'ಈ ಕ್ಲಬ್ 1928 ನೇ ಇಸವಿ ಫೆಬ್ರುವರಿಯಲ್ಲಿ ಸ್ಥಾಪಿತಗೊಳ್ಳಟ್ಟಿತು. ಪ್ರಾರಂಭದಿಂದಲೇ ಮೆ. ರಾ. ಜಿ ಯಂ. ಮಂಜನಾಥಯ್ಯನವರು ಇದರ ಅಧ್ಯಕ್ಷರಾಗಿ ಆರಿಸಲ್ಪಟ್ಟಿದ್ದರು. ಕೆಲವು ಕಾಲ ಚೆನ್ನಾಗಿ ನಡೆದ ಈ ಕ್ಲಬ್ ನಂತರ ಕ್ಷೀಣಗತಿಯನ್ನು ಹೊಂದಲಾರಂಭಿಸಿತು. ಕಮಿಟಿ ಮೆಂಬರುಗಳಲ್ಲಿ ಕಾರ್ಯತತ್ಪರತೆಯು ಉತ್ಸಾಹವು ಕಡಮೆಯಾದುದೂ, ಸದಸ್ಯರುಗಳು ತಮ್ಮ ವಾರ್ಷಿಕ ಚಂದಾ ಹಣವನ್ನು ಸರಿಯಾಗಿ ಪಾವತಿ ಮಾಡದೆ ಇದ್ದದ್ದೂ, ಚಂದಾವನ್ನು 8 ಆಣೆಯಿಂದ 4 ಆಣೆಗೆ ಇಳಿಸಿ ಪುನಹ ಅದನ್ನು ಏರಿಸಿದ್ದೂ, ಇದರ ಮೆಂಬರುಗಳಾದ ಸ್ಥಳೀಯ ಸರ್ಕಾರಿ ಉದ್ಯೋಗಸ್ಥರ ವರ್ಗಾವರ್ಗಿಯೂ ಇದರ ಕ್ಷೀಣಗತಿಗೆ ಮುಖ್ಯ ಕಾರಣಗಳು. ಈ ಸ್ಥಿತಿಯನ್ನು ನೋಡಿ ವನನೊಂದ ಮಹನೀಯರು ಕಳೆದ ಆಗೊಸ್ತು ತಿಂಗಳಲ್ಲಿ ಒಂದು ಜನರಲ್ ವಿೂಟಿಂಗು ನಡಿಸಿ ಮೆ. ಜಿ. ಯಂ. ಮಂಜನಾಥಯ್ಯನವರನ್ನು ಅಧ್ಯಕ್ಷರಾಗಿಯೂ, ಮೆ. ಪಿ ಎ. ನಂಜಪ್ಪನವರನ್ನು ಉಪಾಧ್ಯಕ್ಷರಾಗಿಯೂ, ಡಾ ಸಿ. ಬಿ. ಅಚ್ಚಯ್ಯನವರನ್ನು ಗೌ. ಕಾರ್ಯದರ್ಶಿಯಾಗಿಯೂ, ಮೆ. ಗಳಾದ ಕೆ. ಮುತ್ತಂಣನವರು, ಕೆ. ಸಿ. ಬೆಳ್ಯಪ್ಪನವರು, ಸಿ. ಕೆ. ತಿಮ್ಮಯ್ಯನವರು ಮತ್ತು ಕೆ. ಕೆ. ಕಾರ್ಯಪ್ಪನವರನ್ನು ಕಮಿಟಿ ಮೆಂಬರುಗಳಾಗಿಯೂ ಆರಿಸಿದರು. ಈ ಮಹನೀಯರ ಶ್ರದ್ಧೆಯಿಂದ ಕ್ಲಬ್ಬಿನ ಮೆಂಬರುಗಳ ಸಂಖ್ಯೆ 30 ಕ್ಕೆ ಏರಿ ಈಗ ಅಭಿವೃದ್ಧಿ ಹೊಂದುತ್ತಿದೆ.

ಕ್ಲಬ್ಬಿನ ಕೆಲಸ ಕಾರ್ಯಗಳಿಗೆ ಅನುಕೂಲವಾಗುವಂತೆ ಮೂನ್ಯ ಪ್ರೆಸಿಡೆಂಟರಾದ ಶ್ರೀ ಜಿ. ಯಂ. ಮಂಜನಾಥಯ್ಯನವರು ತಮ್ಮ ಕಟ್ಟಡವನ್ನು ಉದಾರಭಾವದಿಂದ ಮೂಫಿುಗಿ ಬಿಟ್ಟುಕೊಟ್ಟು, ಸದಸ್ಯರುಗಳಲ್ಲಿ ಪರಸ್ಪರ ಪ್ರೀತಿ, ಒಗ್ಗಟ್ಟು, ಸ್ವದೇಶಾಭಿವೂನ ಮತ್ತು ಸ್ವಮತ ಪ್ರೇವವನ್ನು ಹುಟ್ಟಿಸಿದ್ದು ಶ್ಲಾಘನೀಯವಾದ ಕಾರ್ಯವಾಗಿದೆ. ಅಧ್ಯಕ್ಷ ಮಹಾಶಯರು ಇದರಿಂದ ತೃಪ್ತರಾಗದೆ ಇತ್ತೀಚೆಗೆ ವಿಶಾಲವಾದ ಕಿಟಿಕಿಗಳಿಂದ ಕೂಡಿ ಗಾಳಿ ಸಂಚಾರಕ್ಕೆ ಅನುಕೂಲವಾದ ಉತ್ತಮವಾದ ಕಟ್ಟಡವನ್ನು ಬಿಟ್ಟುಕೊಟ್ಟು ಅವರಿಗೆ ಜನಸೇವೆಯಲ್ಲಿರುವ ಉತ್ಸಾಹವನ್ನು ತೋರಿಸಿದ್ದಕ್ಕೆ ಅವರಿಗೆ ಎಷ್ಟು ವಂದಿಸಿದರೂ ಸಾಲದು. ಇವರ ಸ್ವಾರ್ಥತ್ಯಾಗದ ಕಾರ್ಯವು ದೇಶದ ಬೇರೆ ಮಹನೀಯರಿಗೆ ಒಂದು ಉದಾಹರಣೆಯಾಗಿರುವುದರಲ್ಲಿ ಸಂಶಯವಿಲ್ಲ. ಇವು ಉದಾರ ಭಾವದಿಂದ ಕ್ಲಬ್ಬಿನ ಸದಸ್ಯರುಗಳಲ್ಲಿ ಒಂದು ಹೊಸ ಹುರುಪು ಉಂಟಾಗಿದೆ.

ಕ್ಲಬ್ಬಿಗೆ ದೈನಿಕ ಪತ್ರಿಕೆಗಳಾದ 'ಹಿಂದು' ಮತ್ತು 'ತಾಯ್ನಾಡು' ಪತ್ರಿಕೆಗಳನ್ನು ತರಿಸುತ್ತಿರುವುದಲ್ಲದೆ, ಚೆಸ್ ಮತ್ತು ಕೇಡಂ ಆಟಗಳ ಏರ್ಪಾಡು ವೂಡಲಾಗುತ್ತಿದೆ. ಬ್ಯಾಡ್‌ವಿಂಟನ್ ಆಟವೂ ಇದೆ. ಗೌರವ ಕಾರ್ಯದರ್ಶಿಯವರು ಮಾರ್ಗದರ್ಶಕರಾಂತಿದ್ದರೂ ಮೆ ಯಂ. ಯಸ್. ವೂನಯ್ಯನವರು ಕ್ಲಬ್ಬಿಗಾಗಿ ತುಂಬಾ ಶ್ರದ್ಧೆಯಿಂದ ಕೆಲಸ ವೂಡುತ್ತಿದ್ದಾರೆ. ಈಗಿನ ಕಾರ್ಯಕಾರಿ ಮಂಡಳಿಯವರ ಎಚ್ಚರಿಕೆಯಲ್ಲಿ ಕ್ಲಬ್ಬು ಮುಂದೆ ಅಭಿವೃದ್ಧಿಯಾಗುವದೆಂಬುದರಲ್ಲಿ ಸಂದೇಹವಿಲ್ಲ'

ಈ ವರದಿಯನ್ನು ಓದಿದ ನಂತರ ಮೆ. ಎ. ಯಸ್. ವೂಚಯ್ಯನವರು 'ಅಧ್ಯಕ್ಷರ ಉದಾರ ಭಾವವನ್ನು ಕುರಿತು ಸೆಕ್ರೆಟರಿಯವರ ವರದಿಯಲ್ಲಿ ಹೇಳಿದ್ದು ನ್ಯಾಯವಾಗಿದೆ. ಈ ಕ್ಲಬ್ಬಿಗೆ ಪೆಟ್ರೊಮೇಕ್ಸ್ ದೀಪ ಒಂದು ಅವಶ್ಯವಿರುವುದರಿಂದ ಅದಕ್ಕಾಗಿ ಚಾದಾವೆತ್ತಿ ಒಂದನ್ನು ತರಿಸುವುದು ಉತ್ತಮ' ಎಂದು ಮುಂತಾಗಿ ವೂತಾಡಿದರು.

ಇಷ್ಟೆಲ್ಲಾ ಆನಂದದಲ್ಲಿ ನಡೆದ ಕೂಟದಲ್ಲಿ ಒಂದು ವ್ಯಸನದ ಸಂಗತಿ ಇತ್ತು. ಅಲ್ಲಿ ನೆರೆದಿದ್ದವರು ಹೆಚ್ಚಾಗಿ ವಿದ್ಯಾವಂತರು ಮತ್ತು ಬುದ್ಧಿವಂತರು ಸಮಾಜ ಸುಧಾರಣೆಯಲ್ಲಿ ಅವರು ಬೇರೆಯವರಿಗೆ ಉದಾಹರಣ ರೂಪದಲ್ಲಿರಬೇಕು. ಅತಿಥವರೇ ದೇಶದವರ ಆರ್ಥಿಕ ದುಃಸ್ಥಿತಿಗೂ, ಅನಾರೋಗ್ಯಕ್ಕೂ, ವೂನಹಾನಿಗೂ ಮುಖ್ಯ ಕಾರಣವಾಗಿರುವ ನಿಷಾಸದಾರ್ಥದ ಸೇವನೆಗೆ ಅಲ್ಲಿ ಎಡೆಕೊಟ್ಟಿದ್ದಕ್ಕೆ ಎಷ್ಟು ವಿಷಾದಿಸಿದರೂ ಸ್ವಲ್ಪವೇ. ಇನ್ನು ಮುಂದಾದರೂ ಇಂಥಕ್ಕೆ ಅವಕಾಶ ಕೊಡಲಿಕ್ಕಿಲ್ಲವಾಗಿ ಆಶಿಸುತ್ತೇನೆ.'

ಎ. ಯಸ್. ವೂಚಯ್ಯ.

ಸಮರ್ಪಕ ಆಡಳಿತದಿಂದ, ಕಡಿಮೆಯಾದ ವ್ಯಯದಿಂದ, ಕ್ರಮಕ್ರಮವಾದ ಅಭಿವೃದ್ಧಿಯಿಂದ
ಭಾರತ ವಿವೂರಂಗದಲ್ಲಿ ಯೋಗ್ಯಸ್ಥಾನವನ್ನೂ, ಉಚ್ಚಗೌರವವನ್ನೂ ಸಂಪಾದಿಸಿರುವ

ವುಂಗಳೂರಿನ

ದಿ ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿ, ಲಿವಿಟೆಡ್.

ಕನ್ನಡಿಗರ ಹೆಮ್ಮೆಯ, ನಿಮ್ಮ ಒಲುವೆಯ ಈ ಸಂಸ್ಥೆಯಲ್ಲಿ
ತಪ್ಪದೆ ವಿವೆಯನ್ನಿಳಿಸಿ.

ವೊದಲಬೇ ೨ ವರ್ಷಗಳ ವಾರ್ಷಿಕ ವೇತನದ ಫಲಿತಾಂಶವಾಗಿ ಪ್ರತಿಯೊಂದು
1000 ರೂಪಾಯಿಗಳ ವಿವೂಪತ್ರದ ವೇಲೆ,—

ವರ್ಷ 1ರ ರೂಪಾಯಿ 10ರ ಬೋನಸ್ ಕೊಡಲಾಗಿದೆ.

(ಪ್ರಥವ ವಾರ್ಷಿಕ ವೇತನದಲ್ಲಿ ಇಷ್ಟು ಬೋನಸನ್ನು ಹಾಚಿದ ಹಿಂದೀ ವಿವೂಕಂಪೆನಿಗಳು
ಅತಿ ವಿರಳವೆಂಬುದನ್ನು ವರೆಯದಿರಿ)

ನಮ್ಮ ಪ್ರಾತಿನಿಧ್ಯವಿಲ್ಲದ ಎಲ್ಲ ಕಡೆಗಳಲ್ಲಿ ವ್ಯವಹಾರಕುಶಲರೂ, ವ್ಯಾಪಕರೂ, ಯೋಗ್ಯರೂ ಆದ

ಏಜಂಟರು ಬೇಕು.

ವೂಹಿತಿಪತ್ರ, ವಿವರಣೆಯ ಹಸ್ತಕಾದಿಗಳಿಗೆ:—

ವುಂಗಳೂರಿನ ಕಾರ್ಯಾಲಯಕ್ಕೆ ಬರೆದು-ಕೇಳಿ.

ಮಡಿಕೇರಿ ಏಜಂಟರು—
ಬಿ. ಜಿ. ಬೆಳ್ಯಪ್ಪನವರು,
ವಸ್ತ್ರಗಳ ವ್ಯಾಪಾರಿ, ಮಡಿಕೇರಿ. (52—4)

ಸುಂಟಿಕೊಪ್ಪ ಏಜಂಟರು—
ಏ. ಎಸ್. ವೂಚಯ್ಯನವರು.
ವಸ್ತ್ರಗಳ ವ್ಯಾಪಾರಿ, ಸುಂಟಿಕೊಪ್ಪ.

ಡಾಕ್ಟರ್ ಮೇತ್ಯುಸ್ ಎಬ್ರಹಾಮ್.
ದಂತ ವೈದ್ಯರು.
ಗೀತಾಂಜಲಿ ಬಂಗ್ಲೆ.
(ಪೋಸ್ಟಾಫೀಸು ಎದುರುಗಡೆ.)

ಸಕಲ ಹಲ್ಲು ನೋವುಗಳನ್ನು ಶೀಘ್ರವಾಗಿ ಗುಣಪಡಿಸುವರಲ್ಲದೆ, ಸುಂದರವಾದ ಕೃತ್ರಿಮ ಹಲ್ಲುಗಳನ್ನು ಮನಒಪ್ಪುವಂತೆ ಕಟ್ಟುವರು. ಒಮ್ಮೆ ಪರೀಕ್ಷಿಸಿದಲ್ಲು ತಿಳಿಯುವುದು. [52—22]

---

೪೦ ವರ್ಷಗಳಿಂದ ಅನುಭವಪಟು ಪ್ರಖ್ಯಾತಿ ಹೊಂದಿದ

ಕರ್ಕಕಂಪನಿ ಯವರ

ಜ್ವರದ ಗುಳಿಗೆಗಳು.

ಚಳಿಜ್ವರ, ಚಾತುರ್ಥೆ ಜ್ವರ, ದಿನಬಿಟ್ಟು ಬರುವ ಜ್ವರ, ಮಲೇರಿಯಾ ಜ್ವರ ಇತ್ಯಾದಿ ಜ್ವರಗಳ ಮೇಲೆ ರಾಮ ಬಾಣದಂತೆ ಇವೆ. ಬಾಟ್ಲಿಗೆ ರೂ. ೧. ಟಿ. ಖ. ೭ ಆಣೆ. ಜರೂರು ತರಿಸಿಕೊಳ್ಳಿ.

ಗಣೇಶ ರಾಮಚಂದ್ರ ಕರ್ಕ,
(25—24) ಮತ್ತು ಕಂಪನಿ,
ಗಿರಗಾಂವ, ಮುಂಬಯಿ.

SHIROMANI NARAYANACHARYA
Choukhamba Benares City.

THIS MAN
OUR CUSTOMER

ಶಾಸ್ತ್ರಿಗಳೇ, ಪೂರ್ವಕರು ಆರೋಗ್ಯರೇ ಅಥವ ಈಗಿನವರೇ? ರಾಮಣ್ಣಯ್ಯನವರೇ, ಪೂರ್ವಕರ ಆರೋಗ್ಯವೇ ನಿಜವಾದ ಆರೋಗ್ಯ. ಅದಕ್ಕೆ ಕಾರಣವೇನು? ಅವರು ರುದ್ರಾಕ್ಷಿಯನ್ನು ಬಿಡದೆ ಯಾವಾಗಲೂ ಧಾರಣೆಮಾಡುತ್ತ ಇದ್ದರು. ಅದರಿಂದ ಏನು ಫಲ? ಅದನ್ನು ಧರಿಸಿದರೆ ಜೀರ್ಣಶಕ್ತಿ, ಬುದ್ಧಿಶಕ್ತಿ, ವಿದ್ಯಾಭಿವೃದ್ಧಿ, ವೀರ್ಯವೃದ್ಧಿಸಂಪತ್ತು, ಕೀರ್ತಿ ಇವುಗಳೆಲ್ಲಾ ಆಗುವುವು ಹಾಗಾದರೆ ನಮಗೆ ಅಂತಹ ರುದ್ರಾಕ್ಷಿ ಎಲ್ಲಿ ದೊರೆಯುವುದು? ಅದು ಲೋಕಪ್ರಸಿದ್ಧಿ ಹೊಂದಿದ ನಮ್ಮ ಕಾಶೀ ಚೌಖಂಬಾ ಶಿರೋಮಣೀ ನಾರಾಯಣಾಚಾರ್ಯರಲ್ಲಿಯೇ ಯೋಗ್ಯವಾದ ಕ್ರಯಕ್ಕೆ ಉತ್ತಮ ತರದ ರುದ್ರಾಕ್ಷೀ ದೊರೆಯುವುದು.

ಸಣ್ಣ ಆಡ್ಡೆ ಪ್ರವೂಣದ ಕಂಠಿಸರ 1ಕ್ಕೆ ಆಣೆ 1 ರಿಂದ ರೂ. 25ರ ವರೆಗೆ 108 ರುದ್ರಾಕ್ಷಿಗಳುಳ್ಳ ಸರ 1ಕ್ಕೆ ಆಣೆ 3ರಿಂದ ರೂ. 25ರ ವರೆಗೆ. ಗೌರೀಶಂಕರ ರುದ್ರಾಕ್ಷಿ 1ಕ್ಕೆ ರೂ. 3ರಿಂದ ರೂ. 50ರ ವರೆಗೆ. ಮತ್ತು 3—4—5—6—7—8 ಮುಖಗಳ ಕಾಳು 1ಕ್ಕೆ ಆಣೆ 4 ರಿಂದ ರೂ. 10. ಮತ್ತು 9—10—11 ಮುಖಗಳುಳ್ಳ ಕಾಳು 1ಕ್ಕೆ ರೂ 1ರಿಂದ 30ರ ವರೆಗೆ. 12—13—14 ಮುಖದ ಕಾಳು 1ಕ್ಕೆ ರೂ 4ರಿಂದ 100ರ ವರೆಗೆ. ಸಣ್ಣ ರುದ್ರಾಕ್ಷೀ ಅವರೆ ಕಾಳಿಗಿಂತ ಸಣ್ಣದಾಗುತ್ತ ಕ್ರಯ ಜಾಸ್ತಿ. ದೊಡ್ಡ ರುದ್ರಾಕ್ಷೀ ಅಡಕೆಗಿಂತ ದೊಡ್ಡದಾಗುತ್ತ ಕ್ರಯ ಜಾಸ್ತಿ ಆಗುವುದು. (ನಿಮಗೆ ಕೆಟಲಾಗಿಗೆ ಬರೆದರೆ ಇನಾಮಾಗಿ ಕಳುಹಿಸುತ್ತೇವೆ. 1 ಆಣೆ ಸ್ಟ್ಯಾಂಪು ಕಳುಹಿಸಿದರೆ 3 ಇನಾಮುಗಳು—1 ವಿಶ್ವೇಶ್ವರ ಪಟ, 1 ಕಾಶೀ ನಕ್ಷೆ 1 ಕಾಶಿ ಪಿತ್ರಂಬರ ಕೆಟಲಾಗಿನೊಡನೆ 3 ಇನಾಮುಗಳು.)

ಶಿರೋಮಣಿ ನಾರಾಯಣಾಚಾರ್ಯರ್,
52—29 ಚೌಖಂಬಾ ಬೆನಾರಿಸ್, (ಕಾಶೀ)

ಮೂರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಮತ್ತು ದವಸ ಭಂಡಾರದ ಅನಿಬಂಧನೆಗಳೂ, ಪಾಸ್ ಬುಕ್ಕುಗಳೂ, ಎಲ್ಲಾ ಸಹಕಾರಿ ಸಂಘಗಳ ಮತ್ತು ದವಸ ಭಂಡಾರಗಳ ಕೆಲಸಗಳನ್ನು ಕ್ರಮಪ್ರಕಾರ ನಡಿಸಲು ಅತ್ಯವಶ್ಯವಾಗಿರುವ, ರಾಜ್ಯಿಗನುಸಾರವಾಗಿ ತಯಾರಿಸಲ್ಪಟ್ಟಿರುವ ದಾವಾ ಫಾರಮುಗಳೂ, ಖರಾರು ಫಾರಮುಗಳೂ, ಜಮ್ಮ ಮಂಜೂರಾತಿ ಫಾರಮುಗಳೂ, ಕುಟುಂಬಸ್ಥರ ಒಪ್ಪಿಗೆ ಫಾರಮುಗಳೂ, ಜಾಮೀನು ಖರಾರು ಫಾರಮುಗಳೂ, ಸೆಕ್ಷೀರ್ ಕೇಸರ್ ಖರಾರು ಫಾರಮುಗಳೂ ಹಿವಜರ್ ಪುಸ್ತಕಗಳೂ, ರಶೀತಿ ಪುಸ್ತಕಗಳೂ; ಜಮಾ ಖರ್ಚಿ ರಿಜಿಸ್ಟರ್ ಪುಸ್ತಕಗಳೂ, ಮತ್ತು ಚೆಕ್ ಪುಸ್ತಕಗಳೂ ನಮ್ಮ ಕಡಿಮೆ ಕ್ರಯದಲ್ಲಿ ದೊರೆಯುತ್ತವೆ. ಮಿದ್ದು ಒರಲಕ್ಕೆ ಆಗದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು

ಮೇನೇಜರ್
"ಕೊಡಗು, ಲಿಮಿಟೆಡ್,
ಮಡಿಕೇರಿ.

ಗುಂಡು ಹೊಡೆಯುವ ಕ್ರಮಗಳು.
ಉಪಯುಕ್ತ ಸೂಚನೆಗಳು.

ಶಿಕಾರಿಗಳಿಗೆ:—

ನಮ್ಮ ಕೋವಿ ಮತ್ತು ತೋಟಾಗಳು ಶಿಕ್ಷಕ (Our arms and ammunition GUIDE 3) ಇದರಲ್ಲಿ ಗುಂಡು ಹೊಡೆಯುವ ನೂತನ ವಿಧಾನಗಳ ವಿಷಯ ಅತಿ ಉಪಯುಕ್ತ ಸೂಚನೆಗಳಿವೆ.



Goolamhusain Allibhoy & Sons, Ltd.,
26—24 210, Abdulrehman Street, B O M B A Y 3.

ಸನ್ 1882ನೇ ಇಸವಿ ಇಂಡಿಯನ್ ಟ್ರಸ್ಟ್ ಆಕ್ಟಿಗೆ ಒಳಪಟ್ಟು ಸರಕಾರದ ಭರವಸೆಯುಳ್ಳ

ದಿ ಬೋಂಬೆ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಅಧ್ಯಕ್ಷರು—ಮಾನನೀಯ ಸರ್ ಲಲ್ಲುಭಾಯಿ ಸಾನುಲದಾಸ್,
ಕೆ. ಟಿ. ಸಿ. ಐ. ಇ., ಜೆ. ಪಿ. ಯವರು.

ಕೊಚ್ಚಿಕಾರ್ ಬ್ರದರ್ಸ್ ಮದ್ರಾಸು ಬ್ರಾಂಚ್ ಸೆಕ್ರೆಟರಿಗಳು.

ಕಳೆದ ಲಾಭ ಹಂಚುವಿಕೆಯಲ್ಲು ರೂ. 18ರಿಂದ 23ರ ವರೆಗೆ ಬೋನಸು ಡಿಕ್ಲೇರಾಗಿರುತ್ತೆ.

ಹಿಂದಿಯರಿಂದ ಸ್ಥಾಪಿಸಲ್ಪಟ್ಟು ಹಿಂದೂದೇಶದವರಿಗಾಗಿ ಜೀವವಿಮೆಗೆ ಸಮ್ಮಂದಪಟ್ಟಿರುವ ಅತ್ಯುತ್ತಮ ತರದ ಲಕ್ಷಣಗಳಿಂದ ಕೂಡಿ ಕಮ್ಮಿ ಪ್ರೀಮಿಯಮ್ ದರದಲ್ಲಿ ಪಾಲಿಸಿ ಕೊಡುವ ಕಂಪೆನಿ ಇದೆಂದು ಮನಪೂರ್ತಿ ನಂಬಿರಿ.
ಪತಿವ್ರತೆಯರು ಮತ್ತು ವ್ಯಾಪಾರಸ್ಥರು ವಗೈರೆಯರಿಗೆ ವಿಶೇಷವಾಗಿ (ಜಾಯಿಂಟ್ ಲೈಫ್) ಪಾಲಿಸಿ ಕಮ್ಮಿ ಪ್ರೀಮಿಯಮ್ ದರದಲ್ಲು ಕೊಡುವ ಈ ಕಂಪೆನಿಯು ಹೆಸರುಗೊಂಡಿದೆ.
ಪಾಲಿಸಿದಾರರು ಅಕಾಲಾತ್ ತಾಗಿ ಅಂಗಹೀನರಾದರೆ ಅಂಥವರಿಗೆ ಪಾಲಿಸಿಯ ಮೊಬಲಗನ್ನು ಮುಂದಿನ ಪ್ರೀಮಿಯಮ್ ವಸೂಲಾತಿ ಇಲ್ಲದೆ ಪೈಸಾ ರೀತಿಯಲ್ಲು ಉದಾರತ್ವದಿಂದ ಕೊಡಲು ಈ ಕಂಪೆನಿಯು ಎದುರು ನಿಂತಿದೆ ಎಂದು ನೆನಪಿರಲಿ.
ಮುತುವರ್ಜಿಯಿಂದ ಕೆಲಸ ಮಾಡಲು ಇಚ್ಛಿಸುವ ಗಾಡಸರು ಮತ್ತು ಹೆಂಗಸರಿಗೆ ಉತ್ತಮ ತರಹದ ಕಮಿಶನ್ ವಗೈರೆಯಿಂದ ಏಜೆನ್ಸಿ ಕೊಡಲಾಗುತ್ತೆ.

ಹೆಚ್ಚಿನ ಮಾಹಿತಿಗೆ—ಬಿ. ಎಸ್. ಐಯ್ಯಪ್ಪು,
ಕೊಡಗು ಚೀಫ್ ಏಜೆಂಟ್,
26—14 ಮಹದೇವಪೇಟೆ, ಮಡಿಕೇರಿ.

ಎರಡು ಕೆಲಸಕ್ಕೊಂದೇ ಸಾಬೂನು

"ಮೈಸೂರು ಗಂಧದ ಸಾಬೂನು."



ಈ ಸಾಬೂನು ನಾಜೂಕಾದ ಚರ್ಮವನ್ನು ಶುಭ್ರಗೊಳಿಸುವುದು ಮಾತ್ರವಲ್ಲ; ಸಂರಕ್ಷಣೆಯನ್ನೂ ಮಾಡುತ್ತದೆ, ಯಾರು ಯಾರು ತಮ್ಮ ಆರೋಗ್ಯದ ಕಡೆ ಗಮನವಿಡುವರೋ ಯಾರು ಯಾರು ತಮ್ಮ ಚರ್ಮವನ್ನು ಎಚ್ಚರಿಕೆಯಿಂದ ಸೋಡುವರೋ ಅವರೆಲ್ಲರೂ ಉಪಯೋಗಿಸುವುದು ಮೈಸೂರು ಗಂಧದ ಸಾಬೂನು.

ಎಲ್ಲಾ ಅಂಗಡಿಗಳಲ್ಲಿ ಸಿಕ್ಕುತ್ತವೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ.

52—55 ಬೆಂಗಳೂರು.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್,
ಲಿಮಿಟೆಡ್, ಕೋ-ಆಪರೇಟಿವ್ ಸೊಸೈಟೀಸ್
ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

(ಸ್ಥಾಪಿಸಿದವರಾದದ್ದು 1922ರಲ್ಲಿ)

		ರೂ.
ಶೇರ್ ಬಂಡವಾಳ	—	50,000— 0—0
ವಸೂಲಾದ ಶೇರ್ ಮೊಬಲಗು	—	37,180— 0—0
ಜಮೂಬಂದ ಠೇವಣಾತಿ	—	25,9035—8—10
ವಸೂಲಾದ ಕ್ಷೇಮನಿಧಿ	—	1,03851— 4—0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ 4-8-0ರ ದರದಲ್ಲಿಯೂ ಒಂದು ವರ್ಷದ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ದರದಲ್ಲಿಯೂ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಅಜಮಾಯಿಸಿಕೆ ಮಾಡುತ್ತಾರೆ.

ಪ್ರೆಸಿಡೆಂಟರು, ಪಂದ್ಯಂಡ ಐ. ಬೆಳ್ಯಪ್ಪನವರು.

ಟ್ರೆಜರರ್ರು ರಾ. ಸಾ. ಪಾಂಡಂಡ ಚಂಗಪ್ಪನವರು,

ಸಕ್ರೆಟರಿ
ಮನೆಯಪ್ಪಂಡ ಬೆಳ್ಯಪ್ಪನವರು.

ತಾರೀಕು 1—2—1936.

ಭಾರತದ ಮುಂದಿನ ಜನಾಂಗದ ಆರೋಗ್ಯ ಮತ್ತು ಕ್ಷೇಮ ವರ್ಧನೆಯು ಇಂದಿನ ಅನೇಕ ರಾಜಕೀಯ ಮತ್ತು ಸಾಮಾಜಿಕ ಮುಂದಾಳುಗಳ ದೃಷ್ಟಿಯಲ್ಲಿರುವ ಒಂದು ದೊಡ್ಡ ಸಮಸ್ಯೆಯಾಗಿರುತ್ತದೆ. ತಮ್ಮ ಮಕ್ಕಳ ದೇಹವು ಪುಷ್ಟಿಯಾಗಿಯೂ ಸುದೃಢವಾಗಿಯೂ ಇರಲಿಕ್ಕೆ ಬೇಕಾದ ಒಂದು ಅಪೂರ್ವವಾದ ಸಂಜೀವಿನಿಯನ್ನು ಎಲ್ಲರೂ ತಿಳಿದದ್ದಾಗಿದ್ದರೆ ಈ ವಿಚಾರವು ಇಷ್ಟು ಕಠಿಣತರವಾಗಿರುತ್ತಿದ್ದಿಲ್ಲ. ಈ ಸಂಜೀವಿನಿಯಂತಿರುವ ಔಷಧವನ್ನು ಹೆಚ್ಚು ಸಫಲತೆಯಿಂದ ಅನೇಕರು ಭಾರತದ ಉದ್ದಗಲಕ್ಕೂ ಕಳೆದ 50 ವರ್ಷಗಳಿಂದ ಉಪಯೋಗಿಸುತ್ತಲಿರುವರು ಮಗುವು ಹೆಚ್ಚು ಕೃಶವಾಗಿ, ನಿರ್ಬಲತೆಯಿಂದ ಕೂಡಿ ಹಾಲನ್ನು ಸಹ ಜೀರ್ಣಿಸಿಕೊಳ್ಳಲಶಕ್ತವಾಗಿ, ಆಗಿಂದಾಗ್ಯೆ ಶೀತ, ಕೆಮ್ಮು ಮೊದಲಾದ ರೋಗಗಳಿಗೀಡಾಗಿರುವಾದರೆ ಒಡನೆ ಪ್ರಸಿದ್ಧಿ ಹೊಂದಿರುವ

ಡೋಂಗರೆ ಬಾಲಾಮೃತವನ್ನು

ಕೊಡಬೇಕು. ಡೋಂಗರೆ ಬಾಲಾಮೃತವು ಒಂದು ಟಾನಿಕ್, ಎಲ್ಲೆಡೆಗಳಲ್ಲೂ ದೊರೆಯುವುದು.

ಪ್ರೊಪ್ರಾಯಿಟರ್ಸ್—
ಕೆ. ಟಿ. ಡೋಂಗರೆ ಕಂಪೆನಿ,
(52—3) ಗಿರಿಗಾಂವ್, ಬೊಂಬಾಯಿ.

EMPIRE OF INDIA LIFE ASSURANCE CO., LTD.

ESTD. 1897.

TEN YEARS' PROGRESS.

	1925 Rs.	1935 Rs.
Income	45,50,127	73,28,467
New Assurances	78,07,000	1,47,57,880
Total Assets	2,46,08,120	4,50,03,372
Assurances in force	6,95,93,793	11,56,12,828

Form of proposal and other particulars will be sent on Application.

Head office:—
Empire of India Life Building,
BOMBAY.

52—17

Branch Office:—
152/3—Commercial Street,
BANGALORE.

ಪಂಡಿತ ಜವಾಹೀರಲಾಲ್ ನೆಹರೂ ಬಂದಾಗ್ಗೆ ಹುಬ್ಬಳ್ಳಿ ಪ್ರದರ್ಶನದಲ್ಲಿ ಸುವರ್ಣ ಪದಕವನ್ನು ಪಡೆದ,

ಒಂದೇ ಸಮನಾಗಿ ಮೂವತ್ತೈದು ವರ್ಷದ ಅನುಭವದಿಂದ ಹಿಂದುಸ್ಥಾನದ ಸಾವಿರಾರು ಜನರಿಂದ ನಿರ್ಣಯಿಸಲ್ಪಟ್ಟ ಆಯುರ್ವೇದೋಕ್ತ ತಾಜಾ ಮತ್ತು ಪಾಷ್ಟಿಕ ವನಸ್ಪತಿಗಳಿಂದ ತಯಾರಿಸಿರುವ ಮತ್ತು ಇದರ ಗುಣಕ್ಕಾಗಿ ಅನೇಕ ಸರ್ಟಿಫಿಕೇಟುಗಳು ಮತ್ತು ಭಂಗಾರದ ಮೆಡಲುಗಳನ್ನು ಪಡೆದು ಪರದೇಶದಲ್ಲಿ ಧಾರಾಳವಾಗಿ ಖರ್ಚಾಗುವ

ಶಕ್ತಿವರ್ಧಕ ಉತ್ತಮ ತರಗತಿಯ ಟಾನಿಕ್

ದ್ರಾಕ್ಷಾಮೃತ

ಈ ವನಸ್ಪತಿ ರಸಾರ್ಕಗಳಿಂದ ಶಾಸ್ತ್ರೋಕ್ತವಾಗಿ ಸ್ವದೇಶೀ ಯಂತ್ರೋಪಕರಣಗಳಿಂದ ತಯಾರಿಸಿದ ಮಧುರಾಮೃತ.

ಇದರ ಸೇವನೆಯಿಂದ ಉಷ್ಣ (ಗರಮಿ), ಧಾತುಸ್ರಾವ, ಸ್ವಪ್ನಾವಸ್ಥೆ, ಕೈಕಾಲು, ಕಣ್ಣೊಳಗೆ ಉರಿ, ಮಲಬದ್ಧತೆ ಮುಂತಾದವು ಗುಣವಾಗುವದಲ್ಲದೆ ಜೀರ್ಣಶಕ್ತಿಯು ಹೆಚ್ಚಿ ದೇಹದಾರ್ಢ್ಯವುಂಟಾಗುವುದು. ಇದರಿಂದ ನಪುಂಸಕತ್ವವಿದ್ದಲ್ಲಿ ಅದು ಹೋಗಿ ವೀರ್ಯ ವೃದ್ಧಿಯಾಗುವದು. ಹೆಂಗಸರಿಗೂ ಗಂಡಸರಿಗೂ ಇದು ಗುಣಕಾರಿ ಇದೆ. ಮುಟ್ಟಾಗದಿದ್ದರೆ ಮತ್ತು ಉಷ್ಣ (ಗರಮಿ) ರೋಗಗಳಿದ್ದರೆ ಅವೆಲ್ಲವೂ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯಾಗುವದು. ಈ ಔಷಧದ 3 ಬಾಟ್ಲಿಗಳ ಸೇವನೆಯಿಂದ ಪೂರ್ಣ ಗುಣ ಆಗುತ್ತದೆ. 1 ಬಾಟ್ಲಿಯನ್ನು ಸೇವಿಸುವದರಲ್ಲೇ ಇದರ ಗುಣ ಕಂಡು ಬರುವದು. ಪ್ರಮಾಣ:—ಬೆಳಗಿನಲ್ಲಿ ಒಂದು ತೊಲೆ ಮತ್ತು ಸಂಜೆಗೆ ಒಂದು ತೊಲೆ ತಕ್ಕೊಳ್ಳಬೇಕು.

ಬೆಲೆ—1 ಬಾಟ್ಲಿಗೆ ರೂ. 1—4 0, 3 ಬಾಟ್ಲಿಗೆ ರೂ. 3—8—0, 1 ಡಜನ್ ಬಾಟ್ಲಿಗಳಿಗೆ ರೂ. 12—0—0;

ಮ್ಯಾನೇಜರ್:—ದ್ರಾಕ್ಷಾವೃತ ಡಿಪೊ ಪೋಸ್ಟ್ ನಿಪ್ಪಾಣಿ ಜಿಲ್ಲಾ (ಬೆಳಗಾಮ್.)

52—28 ಕೊಡಗಿನ ಏಜಂಟರು—ನಾವೆಲ್ಟಿ ಸ್ಟೋರ್ಸ್, ಮಡಿಕೇರಿ
ಬಿ. ಪುಟ್ಟಯ್ಯ ಶೆಟ್ಟಿ & ಸನ್ಸ್, ಸೋಮವಾರಪೇಟೆ.
ಭಕ್ತಾ ಬ್ರದರ್ಸ್, ತಾಸರಗೋಡು.] ಎ. ಎನ್. ಹರಿಶ್ಚಯ್ಯ, ಮರ್ಚೆಂಟ್, ಗೋಣಿಕೊಪ್ಪಲು.

ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಜೀವ ವಿಮೆ ಕಂಪೆನಿ ಲಿಮಿಟೆಡ್.

(1874ರಲ್ಲಿ ಇಂಡಿಯಾದಲ್ಲಿ ಸ್ಥಾಪನೆಯಾದದ್ದು) (ಹೆಡ್ ಆಫೀಸು—ಬೊಂಬಾಯಿ.

1934ನೇ ಇಸವಿಯ ಕಂಪೆನಿಯ ಕೆಲಸದ ಫಲಿತಾಂಶ—

ಹೊಸ ಪಾಲಿಸಿಗಳ ಪ್ರೀಮಿಯಂ	ರೂ.	7,62,42,761
ವಾರ್ಷಿಕ ಉತ್ಪತ್ತಿ	ರೂ.	3,14,01,970
ಚಾಲ್ತಿಯಲ್ಲಿರುವ ಒಟ್ಟು ಪಾಲಿಸಿಗಳು	ರೂ.	54,20,38,518
ಕ್ಲೇಯಿಮ್ಸ್‌ಗಳಿಗೆ ಕೊಟ್ಟ ಒಟ್ಟು ಹಣ	ರೂ.	16,29,88,814
ಫಂಡ್ಸ್ ಹೆಚ್ಚಿದ್ದು	ರೂ.	15,53,88,843

ಈ ಮೇಲಿನ ಫಲಿತಾಂಶಗಳು 'ಓರಿಯಂಟಲ್' ಕಂಪೆನಿಯ ಸುಸಂಘಟನೆಯನ್ನೂ ಮತ್ತು ಪ್ರಸಿದ್ಧಿಯನ್ನೂ ವಿಷದಗೊಳಿಸುತ್ತವೆ.

ಈ ಪ್ರಸಿದ್ಧಿಗೊಂಡಿರುವ ಮತ್ತು ಅಭಿವೃದ್ಧಿಯಲ್ಲಿರುವ ಇಂಡಿಯನ್ ಜೀವನ ಎನೂ ಕಂಪೆನಿಯಲ್ಲಿ ಏಮೆ ಇಳಿಸಲು ಸಾವಕಾಶ ಮಾಡಬೇಡಿ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಮೇನೇಜರ್, ಓರಿಯಂಟಲ್ ಬಿಲ್ಡಿಂಗ್ಸ್, ಬೊಂಬಾಯಿ.

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರ	ಕಲ್ಲಿಕೋಟೆ	ಕರಾಚಿ	ಮೊಂಬಾಸ	ರಂಗೂನು
ಅಹ್ಮದಾಬಾದು	ಕಲ್ಕತ್ತಾ	ಕೊಲಾಲಂಪೂರು	ನಾಗಪುರ	ರಾವಲ್‌ಪಿಂಡಿ
ಅಜ್ಮೀರ್	ಕೊಲಂಬೊ	ಲಾಹೋರ್	ಪಾಟ್ನ	ಸಿಂಗಪುರ
ಅಲ್ಲಾಹಾಬಾದು	ಢಕ್ಕಾ	ಲಕ್ನೊ	ಪೂನ	ಸುಕ್ಕೂರು
ಅಂಬಾಲಾ	ಜೆಲ್ಲಿ	ಮದ್ರಾಸು	ರಾಯಿಪುರ	ತಿರುಚಿನಾಪಳ್ಳಿ
ಒಳ್ಳಾರಿ	ಗೌಹತಿ	ಮಂಡಲೆ	ರಾಜಶಾಹಿ	ತಿರುವೆಂಡ್ರಮ್
ಬರೇಲಿ	ಜಲಗಾಂ	ಮಡಿಕೇರಿ	ರಾಂಚಿ	ವಿಶಾಖಪಟ್ಟ
ಕೊಯಂಬುತ್ತೂರು	ಗುಂಟೂರು	ಜಲ್‌ಪೇಗುರಿ	ಜಬ್ಬಲ್‌ಪುರ	ಮಧುರೆ & ಮೈಸೂರು

ಓರಿಯಂಟಲ್ ಬಿಲ್ಡಿಂಗ್ಸ್,
ಸೌತ್ ಪೇರೇಡ್, ಬೆಂಗಳೂರು, 52—10

ಯಮ್. ವಿ. ಮುತ್ತುಕೃಷ್ಣ ನಾಯುಡು,
(ಬ್ರಾಂಚ್ ಸಕ್ರೆಟರಿ.)

Printed & Published by P. I. Belliappa at 'Kodagu" Press, Mercara for "Kodagu' Ltd.